24(8)

Licence No. 60.
licenced to Post without Prepayment

Reg. No. M. 1550.
'KODAGU' MERCARA, (Coorg).

ಕೊಡಗು

ಸಂಪಾದಕರು—ಪಿ. ಐ. ಬೆಳ್ಯಪ್ಪನವರು] [ವಾರ್ಷಿಕ ಚಂದಾ ರೂ. 5–0–0.

ಸಂಪುಟ ೩೦ | ತಾರೀಕು ೨೧–೯–೧೯೨೧ನೇ ಶುಕ್ರವಾರ | ಸಂಚಿಕೆ ೧೭

'ನೀವು ಪ್ರತಿನಿಧಿಯಾಗಿದ್ದರೆ....?'

ಲೇ:—ಶ್ರೀ ಬಿ. ಡಿ. ಗಣಪತಿ.

ಕಳೆದ ವಾರ ನಾನು ಬರೆದಿದ್ದ "ನಾವೂ, ನಮ್ಮ ಪ್ರತಿನಿಧಿಗಳೂ" ಎಂಬ ಲೇಖನವನ್ನು ಓದಿದ ಕೌನ್ಸಿಲು ಮೆಂಬರೊಬ್ಬರು ಪೊನ್ನೆಯಿಂದ ನನ್ನೊಡನೆ ಮಾತನಾಡುತ್ತಾ "ನೀವು ಪತ್ರಿಕೆಗಳಲ್ಲಿ ಬರೆಯುವಷ್ಟು ಕಾರ್ಯತಃ ಕೆಲಸ ಸುಲಭವಾಗಿಲ್ಲ. ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಗಳು ಜನರ ಸಂಪರ್ಕವನ್ನು ಇಟ್ಟುಕೊಳ್ಳದೆ ಅವರನ್ನು ಮರೆತುಬಿಡುತ್ತಾರೆ. ಮತ್ತೆ ಜನರ ಹತ್ತಿರ ಹೋಗುವುದು ಇನ್ನೊಂದು ಚುನಾವಣೆಯು ಬಂದಾಗಲೇ ಎಂಬ ನಿಮ್ಮ ವಾದದಲ್ಲಿ ಸತ್ಯವಿರಬಹುದಾದರೂ ಯಾವ ಪ್ರತಿನಿಧಿಯೂ ಅಷ್ಟೇ ಮಾಡಲು ಶಕ್ತನು. ಶಾಸನ ಸಭೆಯ ಸದಸ್ಯನಾಗಿ ಆರಿಸಲ್ಪಟ್ಟಾಕ್ಷಣ ವರ್ಷದ ೩೬೫ ದಿನವೂ ಊರೂರು ಸುತ್ತಿ ಮತದಾರರ ಸೇವೆಯನ್ನು ಮಾಡಲು ಯಾರಿಗೂ ಸಾಧ್ಯವಿಲ್ಲ. ಕೌನ್ಸಿಲು ಸದಸ್ಯತನವೆಂದರೆ ಹೊಟ್ಟೆಗೆ ಅನ್ನ ದೊರೆಯುವ ಮಾರ್ಗವೇನಲ್ಲ. ಧರ್ಮಾರ್ಥವಾಗಿ ಮಾಡುವ ಈ ಕೆಲಸವು ಯಾರಿಂದಲೂ ಸಾಗುವದು ಅಷ್ಟಕಷ್ಟೆ. ಇಂದು ಪತ್ರಿಕೆಯಲ್ಲಿ ನಮ್ಮ ಕರ್ತವ್ಯಪರ ವಿಚಾರ ಉದ್ದ ಬರೆಯುವ ನೀವೂ ಕೂಡ ಜನಪ್ರತಿನಿಧಿಯಾಗಿ ಆರಿಸಲ್ಪಟ್ಟರೆ ಮಾಡುವದಿಷ್ಟೆ" ಎಂದು ಹೇಳಿದರು. ನಾನು ಜನಪ್ರತಿನಿಧಿಯೊದವನ ಕರ್ತವ್ಯವನ್ನು ವಿವರಿಸಿದೆ. ಅವರೂ ಏನೇನೋ ವಿರೋಧ ಹೇಳಿದರು. ಆ ವಿಚಾರವನ್ನೇ ವಾಚಕರೊಡನೆ ಪ್ರಸ್ತಾಪಿಸುವದು ಈ ಲೇಖನದ ಕಾರ್ಯ.

ಜನರ ಪ್ರತಿನಿಧಿಯಾಗುವ ಆಸೆಯು ಕೇವಲ ಹೆಸರಿಗಾಗಿ ಇರದೆ ಜನತೆಯ ಸೇವೆಗಾಗಿ ಇರಬೇಕೆಂದು ನಾನು ಕಳೆದ ವಾರ ಬರೆದಿದ್ದೆ. ಜನತೆಯ ಸೇವೆಯನ್ನು ಹೃತ್ಪೂರ್ವಕವಾಗಿ ಮಾಡುವದು ತನಗೆ ಸಾಧ್ಯವಿಲ್ಲ. ಇದರಿಂದ ಹೊಟ್ಟೆಗೆ ಅನ್ನ ಒದಗುವದಿಲ್ಲವೆನ್ನುವವರು ಪ್ರತಿನಿಧಿಯಾಗದಿರುವುದು ಒಳಿತು. ಜನರು ಒಬ್ಬ ಪ್ರತಿನಿಧಿಗೆ ಮತವಿತ್ತು ಆತನನ್ನು ಆರಿಸಿದವರ ಅರ್ಥವಾದರೂ ಏನು? ಸಾಮಾನ್ಯವಾಗಿ ಜನತೆಯ ಹಿತದ ಬೇಕು ಬೇಡಿಕೆಗಳನ್ನು, ಸರಕಾರದ ಆಡಳಿತದ ತಪ್ಪು ಒಪ್ಪುಗಳನ್ನೂ ಪ್ರತಿಯೊಬ್ಬ ರೈತರೂ ತಿಳಿದುಕೊಳ್ಳಲಾರರು. ತಮಗೆ ಬೇಕಾದ ಸವಲತ್ತನ್ನು ಪಡೆಯಲು ಜನತೆಯೆಲ್ಲ ಸರಕಾರದ ಮುಂದೆ ನಿಂತು ಕೇಳಲಾರದು. ಆದ್ದರಿಂದ ಜನತೆಯ ಆಸೆ ಭರವಸೆಗಳನ್ನು ಸರಕಾರಕ್ಕೆ ತಿಳಿಸಲು ಜನತೆ ತಮ್ಮಲ್ಲಿ ಒಬ್ಬರನ್ನು ಪ್ರತಿನಿಧಿಯಾಗಿ ಆರಿಸುತ್ತದೆ. ಆ ಪ್ರತಿನಿಧಿ ತನ್ನನ್ನು ಆರಿಸಿದವರ ಮುಂದಾಳಲ್ಲ; ಬದಲು ಅವರ ಸೇವೆಗಾಗಿ ಕಂಕಣ ಬದ್ಧನಾದ ಸೇವಕ. ಜನರು ತಮ್ಮೆಲ್ಲರ ವಿಶ್ವಾಸ ಭರವಸೆಗಳನ್ನು ಆತನ ಮೇಲಿರಿಸಿ ಆತನನ್ನು ಪ್ರತಿನಿಧಿಯೆಂದು ಆರಿಸಿರುವುದರಿಂದ ಆತನು ಪ್ರತಿನಿಧಿಸುವ ಆ ಜನರ ಅಭಿಪ್ರಾಯವನ್ನೇ ಆತನು ಪ್ರತಿಬಿಂಬಿಸಬೇಕು. ಹಾಗೆನ್ನುವಾಗ ಜನರ ಕೂಗನ್ನು ಸರಕಾರದ ಮುಂದಿಡುವದೊಂದೇ ಆತನ ಕರ್ತವ್ಯವಲ್ಲ. ಇಂದು ಪ್ರೌಢ ಮತದಾನ ಪದ್ಧತಿಯು ಜಾರಿಯಲ್ಲಿ ಬಂದಿದೆಯೊದರೂ ಮತ ಕೊಡುವವರೆಲ್ಲ ತಮಗೆ ಇಂಥಾದ್ದೇ ಬೇಕ; ಸರಕಾರ ಈ ರೀತಿ ಕಾರ್ಯ ಮಾಡಬೇಕು. ದೇಶದ ಭವಿಷ್ಯ ಈ ರೀತಿಯಾಗಬೇಕೆಂದು ನಿರ್ಣಯಿಸುವಷ್ಟು ಶಕ್ತರಲ್ಲ. ಆದ್ದರಿಂದ ಪ್ರತಿನಿಧಿಗಳಾಗುವವರು ಜನಜಾಗೃತಿಯ ಮಹಾ ಕೆಲಸವನ್ನು ಮಾಡಬೇಕು. ಜನತೆಗೆ ಇಂದು ಬಂದಿರುವ ಓಟಿನ ಹಕ್ಕು, ಅದನ್ನು ತಪ್ಪದೆ ಚಲಾಯಿಸಬೇಕಾದ ಅವಶ್ಯಕತೆಗಳನ್ನು ಮನವಟ್ಟ ಪಡಿಸಬೇಕು. ಅದೇ ಅಲ್ಲ; ಸರಕಾರದ ಆಡಳಿತ ಧೋರಣೆ, ಅದರ ಕಾರ್ಯಕ್ರಮಗಳನ್ನು ವಿವರಿಸಿ ಆ ಧೋರಣೆ ನೀತಿಗಳು ಜನಹಿತಕ್ಕೆ ವಿರುದ್ಧವಾಗಿದ್ದರೆ ಜನಾಭಿಪ್ರಾಯವನ್ನು ಜಾಗೃತಗೊಳಿಸಿ ಸರಕಾರವನ್ನು ಯೋಗ್ಯ ಪಥದಲ್ಲಿ ನಡೆಸುವ ಹೊಣೆಗಾರಿಕೆಯನ್ನು ಹೊರಬೇಕು. ಇಂಥಾ ಜವಾಬ್ದಾರಿಯನ್ನು ಹೊರಬೇಕಾದವನು "ಇದೇನು ಹೊಟ್ಟೆಗೆ ಅನ್ನ ಹಾಕುವ ಮಾರ್ಗವಲ್ಲ" ವೆಂದೂ, ಅದ್ದರಿಂದ ವಿರಾಮವಿದ್ದಾಗ ಸಾಧ್ಯವಾದುದನ್ನು ಮಾಡುವೆನೆನ್ನುವದಾದರೆ ಆತನ, ಜನತೆಯು ಆತನ ಮೇಲಿರಿಸಿದ ವಿಶ್ವಾಸದ ದುರುಪಯೋಗ ಮಾಡಿದಂತಾಗುವುದು. ಗೌರವಾರ್ಥವಾಗಿ ಮಾಡುವ ಕೆಲಸವು ಹೆಚ್ಚೆಸ ಜವಾಬ್ದಾರಿಯುತವಾದುದು. ವೇತನಕ್ಕೆ ದುಡಿಯುವ ದುಡಿವೆ ಯೂ ಮಾಡುವ ಕೆಲಸವು ನಿಶ್ಚಯಿಸಲ್ಪಟ್ಟ ಸಂಬಳದ ಮಟ್ಟಿಗೆ ಮಾತ್ರ ಜವಾಬ್ದಾರಿಯುಳ್ಳದ್ದು. ಸಂಬಳಕ್ಕೆ ಸರಿಯಾದ ಕೆಲಸ ಮಾಡಿದರೆ ಬೇರೆ ಪ್ರಶ್ನಿಸುವಂತಿಲ್ಲ. ಆದರೆ ಸಾರ್ವಜನಿಕ ಗೌರವದ ಕೆಲಸ ಹಾಗಲ್ಲ. ಅದರ ಜವಾಬ್ದಾರಿಗೆ ವಿಶೇಷವಿಲ್ಲ. 'ಈ ಕೆಲಸದಿಂದ ತನಗೆ ಯಾವ ಪ್ರತಿಫಲವೂ ಇಲ್ಲ; ಆದ್ದರಿಂದ ನನ್ನ ಮನಸ್ಸಿನ ಇಚ್ಛೆಯಂತೆ ಸಾಧ್ಯವಿದ್ದಾಗ ಕೆಲಸ ಮಾಡಿದರಾಯಿತು' ಎನ್ನಲಾಗುವುದಿಲ್ಲ. ಆ ರೀತಿಯ ಮನಸ್ಸಿನಿಂದ ಸಾರ್ವಜನಿಕ ಜವಾಬ್ದಾರಿ ವಹಿಸುವವರು ಅಹಿತವನ್ನೇ ಮಾಡಿದಂತಾಗುತ್ತದೆ. ಹಾಗೆನ್ನುವಾಗ ಒಟ್ಟಿಗೆ ದಿನವೂ ಜನತೆಯ ಹಿತಕ್ಕಾಗಿ ತನ್ನನ್ನು ಮರೆತು ದುಡಿಯುತ್ತಿರಬೇಕೆಂಬ ಅರ್ಥವಲ್ಲ. ಅಂಥಾ ಗಾಂಧಿಗಳು ದೊರೆಯುವುದು ಜನತೆಯ ಭಾಗ್ಯ. ಆ ರೀತಿಯ ತ್ಯಾಗ ಮತ್ತು ಸೇವೆ ಎಲ್ಲರಿಗೂ ಸಾಧ್ಯವಿಲ್ಲ. ಆದರೆ ತಾನು ಜನತೆಗೆ ಭಾರವಾಗಿರದೆ, ಅವರಿಗೆ ಅಹಿತವನ್ನುಮಾಡದೆ, ಜನ ನಾಯಕನಾಗಿ ತಾನು ಹೊತ್ತಿರುವ ಜವಾಬ್ದಾರಿಯನ್ನು ನ್ಯಾಯಸಮರ್ಪಕವಾಗಿ ನಿರ್ವಹಿಸುವುದು ಬಹುಜನರಿಗೆ ಸಾಧ್ಯವಿದೆ. ಈ ಸಾಧ್ಯತೆ ಇರುವವರೇ ಜವಾಬ್ದಾರಿ ವಹಿಸಿದರೆ ಹಿತವಾಗುವುದು.

ಕೋಟ್ಯಾಂತರ ಜನರ ಅಚಲ ವಿಶ್ವಾಸವೇ ಮಹಾತ್ಮಗಾಂಧಿಯವರಿಗೆ ಭೀಮ ಬಲವನ್ನು ಕೊಟ್ಟು ಬ್ರಿಟಿಷರ ಶಕ್ತಿಯನ್ನು ಮುರಿಯಿತು. ಲಕ್ಷಾಂತರ ಜನರ ಆ ವಿಶ್ವಾಸವೇ ಜವಾಹರರನ್ನು ಜಗತ್ಪ್ರಸಿದ್ಧ ನಾಯಕರಾಗಿ ಎತ್ತಿ ಕಟ್ಟಿದೆ. ಜನತೆಯ ವಿಶ್ವಾಸ, ಸಚ್ಚಯಿಕೆಗಳೇ ಮುಂದಾಳುಗಳ ಕಾರ್ಯಶಕ್ತಿಯ ದಿವ್ಯ ಕೇಂದ್ರಗಳು. ಹತ್ತು ಸಾವಿರ ಜನರ ಮತವನ್ನು ನ್ಯಾಯ ರೀತಿಯಿಂದ ಪಡೆದು ಆರಿಸಲ್ಪಡುವ ಒಬ್ಬ ಪ್ರತಿನಿಧಿಯಲ್ಲಿ ಅಷ್ಟೆಂದು ಜನರ ಶಕ್ತಿ ಕೇಂದ್ರೀಕೃತವಾಗಿದೆ. ಆತನ ಮೂಗಿಗೆ ಅಷ್ಟೆಂದು ಬೆಲೆ ಇದೆ. ಇಷ್ಟೆಂದು ಮಹಾಶಕ್ತಿ ಸಂಪನ್ನವಾಗಿರುವ ಪ್ರತಿನಿಧಿಯು ತನ್ನಲ್ಲಿ ಕೇಂದ್ರೀಕೃತವಾಗಿರುವ ಈ ಶಕ್ತಿಯನ್ನು ತನ್ನ ಶಕ್ತಿಗೆ ಕಾರಣರಾದವರ ಹಿತಕ್ಕಾಗಿ ಉಪಯೋಗಿಸದೆ ತನ್ನ ಸ್ವಾರ್ಥಸಾಧನೆಗಾಗಿ, ಟೊಳ್ಳುಗೌರವದ ವಿಡಂಬನೆಗಾಗಿ ಉಪಯೋಗಿಸಿಕೊಂಡರೆ ಅದು ದೇಶದ್ರೋಹವಾಗುವದು. ನಾಡಿನ ಜನರ ಪ್ರತಿ ಗುಡಿಸಲಿಗೆ ಬೆಳಕಾಗಬಲ್ಲ ಆ ಶಕ್ತಿಯನ್ನು ನಾಡಿನ ಪ್ರತಿ ಗುಡಿಸಲಿಗೆ ಬೆಂಕಿ ಹಚ್ಚಲು ಉಪಯೋಗಿಸಿದಂತಾಗುವದು. ಇಂಥಾ ಉದಾತ್ತವಾದ ತತ್ವವನ್ನು ಹೇಳುವದು ಸುಲಭ ಹೌದು. ಆದರಂತೆ ಆಚರಿಸುವುದು ಬಹು ಪ್ರಯಾಸವಾಗಿದೆ. ಎಲ್ಲಾ ವ್ಯಕ್ತಿಗಳು ಒಂದೇ ರೀತಿಯವರಲ್ಲ. ಚುನಾಯಿಸಲ್ಪಡುವ ಎಲ್ಲಾ ಪ್ರತಿನಿಧಿಗಳೂ ಒಂದೇ ಯೋಗ್ಯತೆ, ಘನತೆಯವರಲ್ಲ. ಹಲವರಲ್ಲಿ ಹಲವು ರೀತಿಯ ದೌರ್ಬಲ್ಯಗಳಿರುತ್ತವೆ. ಅನೇಕ ಪ್ರಯತ್ನಮಾಡಿದರೂ ಕಾರ್ಯಕೈಗೂಡದಿರುವ ಪರಿಸ್ಥಿತಿ ಇರುತ್ತದೆ. ಇದೆಲ್ಲವನ್ನು ಸಂಪಡಿಸಿ ಜಯದ ಗುರಿಯನ್ನು ತಲಪುವದು ಪ್ರತಿಯೊಬ್ಬನ ಕೈಯಲ್ಲಿಲ್ಲದಿದ್ದರೂ, ನಿಸ್ವಾರ್ಥಭಾವನೆಯಿಂದ ಆ ಗುರಿಗಾಗಿ ದುಡಿಯುವದು ಪ್ರತಿಯೊಬ್ಬನ ಕೈಯಲ್ಲಿದೆ. ಆರಿಸಲ್ಪಡುವ ಪ್ರತಿನಿಧಿಗಳಲ್ಲಿ ಈ ಸೇವಾಭಾವನೆ ಇದ್ದಲ್ಲಿ ಆವರು ಜನರೊಡನೆ ಮಿಳಿತರಾಗದಿರರು. ಚುನಾವಣಾ ಕಾಲಕ್ಕೆ ಮಾತ್ರ ಮತದಾರರ ಬಳಿ ಸುಳಿದು ಮತ್ತೆ ಬೆನ್ನು ಹಾಕಿದಿರರು. ಕೌನ್ಸಿಲು ಮೆಂಬರುತನ ಹೊಟ್ಟೆಗೆ ಅನ್ನ ಹಾಕಲಾರದೆಂಬ ವ್ಯಾಪಾರದೃಷ್ಟಿಯಿಂದ ತಾನು ಹೊತ್ತ ಜವಾಬ್ದಾರಿಯನ್ನು ನೋಡರು.

ಇಷ್ಟು ಹೇಳಿದರೆ ನನ್ನ ಮೂಲ್ಯ ಕೌನ್ಸಿಲ್ ಸ್ನೇಹಿತರಿಗೆ ಉತ್ತರಕೊಟ್ಟಂತಾಗಲಿಲ್ಲ. 'ನೀವು ಪ್ರತಿನಿಧಿಯಾಗಿದ್ದರೆ ಏನನ್ನು ಮಾಡುತ್ತಿದ್ದಿರಿ?' ಎಂಬ ಅವರ ಪ್ರಶ್ನೆಯು ಇದೆ. ಇದಕ್ಕೆ ನಾನೇನು ಮಾಡುತ್ತಿದ್ದೆ ಎಂದು ಬರೆಯುವದು ತೀರಾ ವ್ಯಕ್ತಿಗತವಾಗುವದರಿಂದ ಚುನಾಯಿತರಾದ ಜನಪ್ರತಿನಿಧಿಗಳು ಮುಂದಾದರೂ ಏನು ಮಾಡಬೇಕೆಂಬುದನ್ನು ಬರೆಯುವೆನು.

ಚುನಾವಣೆಯು ಫಲಿತಾಂಶವು ಪ್ರಕಟವಾದಂದಿನಿಂದ ಆರಿಸಲ್ಪಟ್ಟ ಪ್ರತಿನಿಧಿಯ ಜವಾಬ್ದಾರಿಯು ಪ್ರಾರಂಭವಾಗುವದು. ಪ್ರತಿನಿಧಿಯು ಪ್ರಥಮವಾಗಿ ತನ್ನ ಕ್ಷೇತ್ರದ ಪೂರ್ಣ ಮಾಹಿತಿಯನ್ನು ಮಾಡಿಕೊಳ್ಳಬೇಕು. ಪ್ರತಿ ಗ್ರಾಮದಿಂದ ಸರಕಾರಕ್ಕೆ ಕಂದಾಯ ಮತ್ತಿತರ ಆದಾಯ ಎಷ್ಟು ಹೋಗುತ್ತದೆ. ಸರಕಾರದಿಂದ ಗ್ರಾಮಾಂಗಗಳ ಹಿತಕ್ಕಾಗಿ ಎಷ್ಟು ಖರ್ಚಾಗುತ್ತಿದೆ. ಜನರ ಜೀವನ ಮಟ್ಟ ಹೇಗಿದೆ? ಯಾವ ಯಾವ ಅನುಕೂಲತೆಗಳು ಅವರಿಗೆ ಅತ್ಯಾವಶ್ಯಕವಾಗಿದೆ ಎಂಬೀ ವಿಚಾರಗಳ ಅಭ್ಯಾಸಮಾಡಬೇಕು. ಈ ಅಭ್ಯಾಸವು ದೂರದ ಮಡಿಕೇರಿಯಲ್ಲೊ ಇಲ್ಲವೇ ಯಾವುದಾದರೂ ಪೇಟೆಯಲ್ಲೋ ಕೂತುಕೊಂಡು ಸರಕಾರದ ಬಜೆಟ್ ಲೆಕ್ಕಗಳನ್ನು ನೋಡಿಕೊಳ್ಳುವದರಿಂದ ಆಗಲಾರದು. ಚುನಾಯಿತ ಪ್ರತಿನಿಧಿಯು ಚುನಾವಣೆಯ ನಂತರ ಪ್ರತಿ ಗ್ರಾಮಗಳಿಗೆ ಹೋಗಬೇಕು. ಜನರೆಲ್ಲರನ್ನೂ ಸೇರಿಸಬೇಕು ಅವರ ಕಷ್ಟಕಾರ್ಪಣ್ಯಗಳನ್ನು ಕೇಳಬೇಕು. ಅವರಿಗೆ ಅಗತ್ಯವಿರುವ ಅನುಕೂಲತೆಗಳೇನೆಂದು ಪರಿತೀಲಿಸಬೇಕು. ಪ್ರತಿ ಗ್ರಾಮಗಳಲ್ಲೂ ತಪ್ಪದೆ ಸಲಹೆಕೊಡಲು ಸಮರ್ಥರಾದ ನಾಲ್ಕಾರು ಜನರ ಒಂದು ಸಮಿತಿಯನ್ನು ಆರಿಸಬೇಕು. ಹೀಗೆ ಪ್ರತಿ ಗ್ರಾಮಗಳಲ್ಲಿ ಮಾಡಿದ ನಂತರ ಈ ಗ್ರಾಮಸಮಿತಿಯಿಂದ ಆರಿಸಲ್ಪಟ್ಟ ಒಬ್ಬೊಬ್ಬ ಪ್ರತಿನಿಧಿಯಿಂದ ಕೂಡಿದ ಒಂದು ಕೇಂದ್ರ ಸಮಿತಿಯನ್ನು ಮಾಡಿಕೊಳ್ಳಬೇಕು. ಈ ಸಮಿತಿಯೇ ಚುನಾಯಿತ ಪ್ರತಿನಿಧಿಗೆ ಆ ಕ್ಷೇತ್ರದ ಸಲಹಾ ಮಂಡಳಿಯಾಗುವದು.

ಯಾವ ಸರಕಾರವೇ ಆಡಳಿತದಲ್ಲಿರಲಿ, ಯಾರೇ ಪ್ರತಿನಿಧಿಯಾಗಿ ಆರಿಸಲ್ಪಡಲಿ ಗ್ರಾಮ ಜನರ ಸರ್ವ ಬೇಡಿಕೆಗಳನ್ನು ಒಂದೇ ಬಾರಿಗೆ ಸಲ್ಲಿಸುವ ಶಕ್ತಿ ಯಾವ ಸರಕಾರಕ್ಕೂ ಇರದು. ಆದ್ದರಿಂದ ಜನರಿಂದ ಆರಿಸಲ್ಪಟ್ಟ ಪ್ರತಿನಿಧಿಯು ತನ್ನ ಸಲಹಾ ಸಮಿತಿಯೊಡಗೂಡಿ ತಾನು ಪ್ರತಿನಿಧಿಸುವ ಭಾಗದಲ್ಲಿ ಆಗಬೇಕಾದ ಜನಹಿತ ಕೆಲಸಗಳನ್ನು ವಿವೇಚಿಸಿ ಅವುಗಳ ಪ್ರಾಮುಖ್ಯತೆಗೆ ಸರಿಯಾಗಿ ಅವುಗಳನ್ನು ಒಂದರ ನಂತರ ಒಂದು ಜಾರಿಯಲ್ಲಿ ಬರುವಂತೆ ಸರಕಾರಕ್ಕೆ ಬಲವಂತ ಪಡಿಸಬೇಕು ಪ್ರತಿ ನಾಡಿನಿಂದ ಸರಕಾರದ ಬೊಕ್ಕಸಕ್ಕೆ ಹೋಗುವ ಬಡಜನರ ಬೆವರಿನ ಹಣವು ಬಡಜನರ ಹಿತಕ್ಕಾಗಿ ಆಯಾಯ ಭಾಗಗಳಲ್ಲಿ ಖರ್ಚಾಗುವಂತೆ ನೋಡುವದು ಕರ್ತವ್ಯ. ಹಾಗೆನ್ನುವಾಗ ಒಂದು ತಪ್ಪು ತಿಳುವಳಿಕೆಯಾಗಬಹುದು. ಒಬ್ಬ ತೋಟಗಾರನಿಂದ ಸರಕಾರಕ್ಕೆ ಒಂದು ಲಕ್ಷವು ಕರವಾಗಿ ಬರುತ್ತಿದ್ದರೆ ಆ ಒಂದು ಲಕ್ಷಕ್ಕೆ ಪರಿಮಿತವಾಗಿ ಆತನಿಗೆ ಸರಕಾರದಿಂದ ಅನುಕೂಲತೆ ದೊರೆಯಬೇಕೆನ್ನುವುದು ಹಾಸ್ಯಾಸ್ಪದ. ಮಳೆಯಾಗಬೇಕಾದ ಅವಿಯು ನೀರಿರುವ ಸಮುದ್ರ, ಕೊಳಗಳಿಂದಲೇ ಹೆಚ್ಚಾಗಿ ಹೋದರೂ ಮಳೆ ಬೀಳುವಾಗ ಪಕ್ಷಪಾತವಿಲ್ಲದ ಸಮುದ್ರ, ಗುಡ್ಡ,

ಜೆಟ್ಟಿಗಳ ಮೇಲೆ ಬೀಳುವಂತೆ ಧನಾಢ್ಯರಿಂದ ಹೆಚ್ಚಿನ ಕರ ವಸೂಲ್ಮಾಡಿದರೂ ಅದು ಸರ್ವರ ಹಿತಕ್ಕಾಗಿ ವಿನಿಯೋಗವಾಗುವಂತೆ ನೋಡಬೇಕು. ಈ ರೀತಿಯು ವ್ಯವಸ್ಥೆಯನ್ನು ಮಾಡಿಕೊಂಡು ಪ್ರತಿನಿಧಿಯು ಕೆಲಸ ಮಾಡಬೇಕು. ಹೀಗೆ ಮಾಡಿದಕೆ ಪ್ರತಿನಿಧಿಯು ನಾಡಿನ ಜನತೆಯ ಆಸೆ ಭರವಸೆಗಳ ಪ್ರತಿಬಿಂಬವಾಗುವುದಲ್ಲದೆ ಅತನ ಮೂತಿಗೆ ನಾಡಿನ ಜನತೆಯು ವಿಕೀಕೃತ ಮಹಾ ಶಕ್ತಿ ಇರುವುದು. ಅಂಥಾ ವ್ಯಕ್ತಿಯ ಮೂತಿಗೆ ಸರಕಾತವು ತಿರಬಾಗಲೇಬೇಕಾಗುವದು.

ಕೊಡಗಿನ ಶಾಸನ ಸಭಾ ಚರಿತ್ರೆಯಲ್ಲಿ ಈ ರೀತಿಯು ಒಂದು ಕ್ರಾಂತಿ ಆಗಬೇಕು. ಓಬೀರಾಯನ ಕಾಲದ ಆಲಂಕಾರದ ಸದಸ್ಯರಿಂದ ಜನ ಹಿತ ಆಗಲಾರದು. ಜನತೆಯು ಆದ್ದರಿಂದ ವಿವೇಚನೆ ಮಾಡಬೇಕು. ತಮ್ಮ ಸೇವೆಯನ್ನು ಯೋಗ್ಯ ರೀತಿ ಮಾಡಬಲ್ಲವರನ್ನು ಹೆಕ್ಕಿ ಶಾಸನ ಸಭೆಗೆ ಕಳುಹಿಸಬೇಕು. ಏಕೆಂದರೆ ಮುಂಬರುವ ಚುನಾವಣೆಯು ಕೇವಲ ನಿಶ್ಚಿತ ಕೆಲವು ಜನರ ಕಾರ್ಯಕ್ಕನುವಲ್ಲ ಪ್ರೌಢರಾದ ಕೊಡಗಿನ ೯೫,೦೦೦ ಜನರ ಅಭಿಮತವನ್ನು ಪ್ರತಿಬಿಂಬಿಸುವ ಪ್ರತಿನಿಧಿ ಸಭೆಯು ರಚನಾ ಕಾರ್ಯ. ಆದ್ದರಿಂದ ಶಾಸನ ಸಭೆಯು ನಿಜವಾದ ಜನ ಪ್ರತಿನಿಧಿಗಳ ಸಭೆಯೂಗುವಂತೆ ಮಾಡುವದು ಪ್ರತಿಯೊಬ್ಬನ ಕರ್ತವ್ಯ.

॥ ಶ್ರೀಮದ್ಭಗವದ್ಗೀತಾ ॥

— ಮರಣವು ಮಹಾ ನಿದ್ರೆ —

[ಶ್ರೀ ಕಾವೇರಿ ಆಶ್ರಮ ಇವರಿಂದ]

(ಆರನೇ ಅಧ್ಯಾಯ)

ಹುಟ್ಟುವುದು ಸಾಯುವುದಕ್ಕಾಗಿ, ಹುಟ್ಟಿ, ಸಾಯುವುದರ ಮಧ್ಯೆ ಸ್ವಲ್ಪ ಕಾಲ ಬದುಕುತ್ತೇವೆ. ಇದಕ್ಕೆ 'ಈ ಜನ್ಮ' ವೆಂದೆನ್ನುತ್ತೇವೆ. ಈ ಜನ್ಮದಲ್ಲಿ ಕಷ್ಟಪಡುತ್ತಾ ಇರುವಾಗ ಸತ್ತುಹೋದರೆ ಅವನು ಸುಖ ಯಾವಾಗ ಪಡೆಯುವುದು? ಶಾಸ್ತ್ರವು ಹೇಳುತ್ತದೆ ಅವನಿಗೆ ಒಂದೇ ಜನ್ಮವಲ್ಲ, ಅನೇಕ ಜನ್ಮವಿದೆಯೆಂದು. ಹಿಂದಿನ ಜನ್ಮದ ಸಂಸ್ಕಾರದ ಫಲವನ್ನು ಈ ಜನ್ಮದಲ್ಲಿ ಅನುಭವಿಸುತ್ತೇವೆ. ಈಗ ನಾವು ಯಾವುದನ್ನು ಅಭ್ಯಾಸಮಾಡುತ್ತೇವೋ ಮುಂದೆ ಕಾಲಾನುಕಾಲಕ್ಕೆ ಅದರಲ್ಲಿ ಪ್ರವೀಣರಾಗುತ್ತೇವೆ. ಸಪಾ ದೇವರ ಧ್ಯಾನದಲ್ಲಿ ನಿರತನಾಗಿರುವವನು ಈ ಜನ್ಮದಲ್ಲಿ ಹೇವರನ್ನು ಕಾಣದಿದ್ದರೆ ಮುಂಪೆ ಎಂದಾದರೂ ಒಂದು ದಿನ ಕಂಡೇ ಕಾಣುತ್ತಾನೆ. ಯಾವುದಕ್ಕೂ ನಿರಂತರ ಸತತ ಶ್ರಮಬೇಕು. ಆಗಲೇ ಯಾವುದೂ ಸಾಧ್ಯ.

ಇಷನ್ನೆಲ್ಲಾ ಕೇಳುತ್ತಿರುವಾಗ ಅರ್ಜುನನಿಗೆ ಒಂದು ಸಂಶಯ ಬರುತ್ತದೆ. ಹೇ 'ಭಗವಾನ್, ನಾನು ಸ್ವಲ್ಪ ದಿವಸ ಇದ್ದು ಸಾಯುವವನು. ಭಗವಂತಷ ದರ್ಶನ ಹೊಂದಲು ಪ್ರಯತ್ನಿಸುತ್ತಿರುವಾಗ ನಾಳೆಯೇ ಸತ್ತರೆ ವಿಷ್ಣ ಪ್ರಯತ್ನವೆ ಆ ವಿಫಲತಾನೆ?' ಎಂದು. ಅದಕ್ಕೆ ಭಗವಂತನು ಸೂಕ್ತವಾದ ಉತ್ತರ ಕೊಡುತ್ತಾನೆ. 'ಎಲೈ ಅರ್ಜುನ ಶುಭ ಕಾರ್ಯಗಳಲ್ಲಿ ತೊಡಗಿದವನಿಗೆ ಎಂದಿಗೂ ದುರ್ಗತಿ ಇಲ್ಲ. ಅದರ ಒಳ್ಳೆಯ ಫಲವನ್ನು ಅವನು ಮುಂದಕ್ಕೆ ಹೊಂದಿಯೆ ಹೊಂದುತ್ತಾನೆ. ಈ ಜನ್ಮದ ಪ್ರಯತ್ನವು ಮುಂದಿನ ಜನ್ಮದಲ್ಲಿ ಮುಂದುವರಿಯುತ್ತದೆ. ಕಡೆಗೆ ಎಂದಾದರೂ ಒಂದು ದಿನ ಪೂರ್ಣ ಸಫಲತೆ ಹೊಂದುತ್ತಾನೆ,' ಎಂದು ಹೇಳಿದನು. ಮನುಷ್ಯನ ಯತ್ನವು ಈ ಮರಣದಿಂದಲೇ ಮುಗಿದು ಹೋಗಲಿಲ್ಲ. ಪ್ರತಿದಿನವೂ ಮಲಗಿ ನಿದ್ರೆಹೋಗಿ ಪುನಃ ಎದ್ದಕ ಹೊಂದಿ ಮೊದಲಿನ ದಿನದ ಕೆಲಸವನ್ನು ಮುಂದುವರಿಸುವಂತೆ ಮನುಷ್ಯನು ಜನ್ಮವನ್ನು ತಳೆದು (ಮರಣಹೊಂದಿ) ಮುಂದಿನ ಜನ್ಮವನ್ನು ಎತ್ತುತ್ತಾನೆ, ಹೀದಿನ ಜನ್ಮದ ಸಂಸ್ಕಾರವೆಲ್ಲಾ ಮುಂದಿನ ಜನ್ಮಕ್ಕೆ ಅವನಿಗೆ ಸಿಕ್ಕುತ್ತದೆ. ಆದುದರಿಂದಲೇ 'ಮರಣವೆಂದರೆ ಮಹಾನಿದ್ರೆ' ಎನ್ನುತ್ತಾರೆ. ಪ್ರತಿ ದಿನವೂ ನಾವು ಕೆಲವು ಗಂಟೆಗಳ ಕಾಲ ನಿದ್ರಿಸುತ್ತೇವೆ ಹಾಗೆಯೇ ಎಚ್ಚರವಾಗುತ್ತೇವೆ. ಇದು ಸ್ವಭಾವಿಕ. ನಿದ್ರೆ ಮಾಡುತ್ತೇವೆಂದು ನಾವು ವ್ಯಸನಪಡುವುದಿಲ್ಲ. ನಿದ್ರೆ ಬಾರದಿದ್ದರೆ ಗಾಬರಿಗೊಳ್ಳುತ್ತೇವೆ. ಹಾಗೆಯೇ ಮರಣವು ಸಹ. ಮರಣ ಹೊಂದಿ ಈ ಜನ್ಮವನ್ನು ತಳೆದು ಮುಂದಿನ ಜನ್ಮವನ್ನೆತ್ತುತ್ತೇವೆ, ಆದುದರಿಂದ ಮರಣವೆಂದರೆ ಏಕೆ ಹೆದರಬೇಕು? ನಿದ್ರೆಯಂತೆಯೇ ಮರಣವೂ ಒಂದು ಸ್ವಭಾವಿಕವಾದ ಮತ್ತು ಅವಶ್ಯಕವಾದ ಒಂದು ಘಟನೆ. ಇದಕ್ಕಾಗಿ ಸತ್ಯಕ್ಕೆ ವ್ಯಸನಪಡಬೇಕಾಡದ್ದೇನೂ ಇಲ್ಲ. ಸತ್ತು ಪುನಃ ಹುಟ್ಟುತ್ತಾನೆ. ಇದೇ ಪುನರ್ಜನ್ಮ. ಮನುಷ್ಯನು ಹೊಸಬನೇನೂ ಅಲ್ಲ. ಹಳೆಯವನೇ ಹೊಸ ರೂಪಿನಲ್ಲಿರುತ್ತಾನೆ. ಮುಂದಿನ ಜೀವಮಾನವು ಹಿಂದಿನ ಜೀವಮಾನದ ಆಧಾರವನ್ನೇ ಹೊಂದಿಕೊಂಡಿರುತ್ತದೆ. ಹಳೆಯ ಸಂಸ್ಕಾರವು ಅವನನ್ನು ಮುಂದಕ್ಕೆ ಒಯ್ಯುತ್ತದೆ. ನಮ್ಮ ಇಂದಿನ ಜನ್ಮವು ಹಿಂದಿನ ಜನ್ಮದ ಸಂಸ್ಕಾರದ ಆಧಾರದಿಂದ ಆಗಿದೆ. ನಾವು ಅದರ ಆಧಾರದಲ್ಲಿ ನಿಂತು ಇಂದಿನ ಜನ್ಮದ ಸಂಸ್ಕಾರವನ್ನು ಮೂರ್ಪಡಿಸಿಕೊಳ್ಳುತ್ತಿದ್ದೇವೆ. ಆದುದರಿಂದ 'ಜೀವನವೆ ಅಥವಾ ಜಾಳು' ಎಂದಕೆ ಸಂಸ್ಕಾರ ಸಂಚಯವೆಂದು ಕೆಲವರು ಹೇಳುತ್ತಾರೆ. ಹುಟ್ಟಿದಂದಿನಿಂದ ಸಾಯುವ ವರೆಗೆ ಮನುಷ್ಯನ ನಾನಾ ವಿಧ ಕಾರ್ಯಗಳೆಲ್ಲಾ ಅವಷ್ಟೆ ಸಂಸ್ಕಾರವನ್ನು ಬೆಳಿಸುತ್ತದೆ. ನಾವು ಎಷ್ಟೊ ವಿಧ ಕಾರ್ಯಗಳಲ್ಲಿ ತೊಡಗುತ್ತೇವೆ. ಮಾತನಾಡುವುದು, ನೋಡುವುದು, ಕೇಳುವುದು, ಊಟಮಾಡುವುದು, ಸ್ವಪ್ನ ಕಾಣುವುದು, ಜಗಳವಾಡುವುದು, ಓದುವುದು ಹೀಗೆ ನಾನಾ ಕ್ರಿಯೆಗಳು ನಮ್ಮಿಂದಾಗುತ್ತವೆ. ಈ ರೀತಿಯು ಎಲ್ಲಾ ಕೆಲಸಗಳು ಮನುಷ್ಯನ ಸಂಸ್ಕಾರವನ್ನು ಬದಲಾಯಿಸುತ್ತಾ ಬರುತ್ತವೆ. ಒಳ್ಳೆಯ ಕೆಲಸಗಳೇ ಹೆಚ್ಚಾಗಿದ್ದರೆ ಒಳ್ಳೆಯ ಸಂಸ್ಕಾರ. ಕೆಟ್ಟದೇ ಹೆಚ್ಚಾದರೆ ಕೆಟ್ಟ ಸಂಸ್ಕಾರ. ಸಂಸ್ಕಾರವು ಒಂದೆರಡು ದಿನಗಳಲ್ಲಿ ಬದಲಾಯಿಸಲಾರದು. ಅನೇಕ ವರ್ಷಗಳು ಬೇಕಾದೀತು, ಒಂದು ಜನ್ಮವೇ ಬೇಕಾದೀತು. ಮನುಷ್ಯನ ಸಂಸ್ಕಾರವು ಬೆಳೆಯುತ್ತಾ ಬರುವುದಕ್ಕೆ ವ್ಯಾಪಾರದ ಒಂದು ಉದಾಹರಣೆ ಕೊಡಬಹುದು. ವ್ಯಾಪಾರಸ್ತನು ಎಷ್ಟೋ ಸಾವಿರ ರೂಪಾಯಿಗಳನ್ನು ಕೊಡುತ್ತಾನೆ, ತೆಗೆದುಕೊಳ್ಳುತ್ತಾನೆ ಇದರ ಲೆಕ್ಕವನ್ನು ಪ್ರತಿದಿನವು ಬರೆದಿಟ್ಟು ವರ್ಷದ ಕೊನೆಯಲ್ಲಿ ಜಮಾ ಖರ್ಚು ತೆಗೆದು ಕಡೆಗೆ ಇಷ್ಟು ಸಾವಿರ ರೂಪಾಯಿ 'ಲಾಭ' ಎಂದಾಗಲೀ ಅಥವಾ 'ನಷ್ಟ' ಎಂದಾಗಲೀ ಲೆಕ್ಕ ಬರೆಯುತ್ತಾನೆ. ಆವನ ವರ್ಷದ ಇದೇ ಲೇವಾದೇವಿಯ ಫಲವು ಎಷ್ಟೋ 'ಲಾಭ ಅಥವಾ ನಷ್ಟ' ಎಂದು ಬರುತ್ತದೆ. ಹಾಗೆಯೇ ಮನುಷ್ಯನ ಜೀವನೂನದಲ್ಲಿ ಎಷ್ಟೋ ಕ್ರಿಯೆಗಳು ನಡೆದ 'ಒಳ್ಳೆಯ ಸಂಸ್ಕಾರ' ಅಥವಾ 'ಕೆಟ್ಟ ಸಂಸ್ಕಾರ' ಎಂದು ಉಳಿಯುತ್ತದೆ. ಇವನ ಮರಣ ಕಾಲದಲ್ಲಿ ಇವೇ ಅವನ ಆಸ್ತಿ. ಇದನ್ನು ತೆಗೆದುಕೊಂಡು, ಇವನು ತನ್ನ ಜೀವನ ವ್ಯಾಪಾರವನ್ನು ಇನ್ನೊಂದು ಜನ್ಮವನ್ನೆತ್ತಿ ಮುಂದುವರಿಸುತ್ತಾನೆ. ನಾವು ಪ್ರತೀ ದಿನವೂ ಡೈರಿ ಬರೆಯುವ ಅಭ್ಯಾಸವನ್ನು ಇಟ್ಟಿದ್ದರೆ ದಿನವು ಬರೆಯುವದೇನನ್ನು? ಆ ದಿನ ಪಲ್ಲಿ ನಮ್ಮ ಜೀವಮೂನದಲ್ಲಿ ನಡೆದ ೩-೪ ಮುಖ್ಯ ವಿಷಯಗಳನ್ನು ಬರೆಯುತ್ತೇವೆ. ಹೀಗೆ ೨೪ ಗಂಟೆಗಳಲ್ಲಿ ನಡೆದ ಕ್ರಿಯೆಗಳಲ್ಲಿ ೩-೪ ವಿಷಯಗಳು ಮುಖ್ಯವಾದವು. ವಾರದ ಕೊನೆಯಲ್ಲಿ ನಮ್ಮ ಡೈರಿಯನ್ನು ನೋಡಿ, ಈ ವಾರದಲ್ಲಿ ನನ್ನ ಜೀವಮೂನದಲ್ಲಿ ನಡೆದ ಮುಖ್ಯ ವಿಷಯವೇನು ಎಂದು ನೋಡಿದರೆ ೩-೪ ಮುಖ್ಯ ವಿಷಯಗಳು ಆಗಿರುತ್ತವೆ. ತಿಂಗಳಿನ ಕೊನೆಯಲ್ಲಿ ನಮ್ಮ ಡೈರಿಯನ್ನು ನೋಡಿ, ಈ ತಿಂಗಳಲ್ಲಿ ಆದ ಮುಖ್ಯ ವಿಷಯಗಳೇನು ಎಂದು ನೋಡಿದರೆ ೩-೪ ಅಂಶಗಳು ನಮಗೆ ಕಾಣುತ್ತವೆ. ಹೀಗೆಯೇ ಪ್ರತಿ ವರ್ಷದ ಕೊನೆಯಲ್ಲಿ ನಮ್ಮ ಡೈರಿಯನ್ನು ನೋಡಿ ಮುಖ್ಯವಾದದ್ದೇನೆಂದು ನೋಡಿದರೆ ಆಗಲೂ ೩-೪ ವಿಷಯಗಳು ನಮಗೆ ಸ್ಪಷ್ಟವಾಗಿ ತೋರುತ್ತದೆ. ಕಡೆಗೆ ಜೀವಮೂನದ ಅಂತ್ಯದ ದಿನದಲ್ಲಿ ನಮ್ಮ ಇಡೀ ಜೀವಮೂನದಲ್ಲಿ ಆದ ಮುಖ್ಯ ವಿಷಯವೇನೆಂದು ನಾವು ಸ್ಮರಣೆಗೆ ತಂದುಕೊಂಡರೆ ಅದೇ ಮುಖ್ಯವಾದ ಕೆಲವು ಅಂಶಗಳು ನಮ್ಮ ಕಣ್ಣೆದುರಿಗೆ ಬರುತ್ತವೆ. ಈ ಜೀವನದ ಕಡೆಗಳಿಗೆಯಲ್ಲಿ ಕಾಣುವ ಮುಖ್ಯ ವಿಷಯವೇ ನಮ್ಮ ಸಂಸ್ಕಾರ. ಕಡೆಯ ಗಳಿಗೆಯಲ್ಲಿ ಪ್ರತಿ ಮನುಷ್ಯನು ಇದನ್ನು ನೆನೆದೇ ನೆನೆಯುತ್ತಾನೆ. ಯಾವಾಗಲೂ ದೇವರ ಧ್ಯಾನದಲ್ಲಿಯೇ ಇರುವವನು ಕಡೆಯ ಗಳಿಗೆಯಲ್ಲಿ ದೇವರ ಹೆಸರನ್ನು ಹೇಳುತ್ತಾ ಅವನನ್ನೆ ಧ್ಯಾನಿಸುತ್ತಾನೆ. ಮರಣದ ಸಮಯದಲ್ಲಿ ಮಗನ ಚಿಂತೆಯಾದರೆ ಇವನ ಸಂಸ್ಕಾರವೆಲ್ಲಾ ಮಗನ ಮೇಲಿನ ಮೋಹವೇ ಆಯಿತು. ತಿನ್ನುವ ಯೋಚನೆಯಾದರೆ ಅದೇ ಅವನ ಸಂಸ್ಕಾರ. ಆದುದರಿಂದಲೇ ಗೀತೆಯಲ್ಲಿ 'ಸಾಯುವಾಗ ಯಾವನು ನನ್ನನ್ನು ಸ್ಮರಿಸುತ್ತಾನೋ ಅವನು ನನ್ನನ್ನು ಹೊಂದುತ್ತಾನೆ.' ಎಂದು ಭಗವಂತನು ಹೇಳಿದ್ದಾನೆ. ಮರಣ ಕಾಲದಲ್ಲಿ ಭಗವಂತನ ಚಿಂತೆ ಮಾಡಿದರಾಯಿತೆಂದು ಕೂತರಾಗದು. ಅವನ ಚಿಂತೆ ಆ ಕಾಲಕ್ಕೆ ಹೇಗೆ ಬಂದೀತು? ಇಡೀ ಜನ್ಮವನ್ನು ಅವನ ಚಿಂತೆಯಲ್ಲಿ ಕಳೆದಿದ್ದರೆ ತಾನೇ ಮರಣ ಕಾಲದಲ್ಲಿ ಅವನ ಚಿಂತೆ ಬಂದೀತು. ಇಲ್ಲದಿದ್ದರೆ ಅವನ ಚಿಂತೆ ಬಂಡಿತ ಬರುವುದಿಲ್ಲ. ನಮ್ಮ ಜೀವಮೂನದಲ್ಲಿ ನಾವು ಯಾವುದರ ಮೇಲೆ ಚಿಂತೆ ಮಾಡುತ್ತೇವೋ ಅದರ ಚಿಂತೆ ಮಾತ್ರ ಆ ಕಾಲದಲ್ಲಿ ನಮಗೆ ಬರುತ್ತದೆ. ಇದು ಖಂಡಿತವಾದ ವಿಷಯ. ಮೂಡಲು ಸಾಧ್ಯವಾದ ದುರ್ವರ್ತನೆಗಳನ್ನೆಲ್ಲಾ ಮಾಡಿ ಸಾಯುವಾಗ ದೇವರ ಹೆಸರನ್ನು ಹೇಳಿಬಿಟ್ಟು ಮೋಕ್ಷಗಳಿಸುತ್ತೇನೆಂದು ಹೇಳುವ ಮಾತು ಆಗದು. ಪುರಣ ಕಾಲದಲ್ಲಿ ಅವನಿಗೆ ವಂಕು ಕವಿದೀತು ಬುದ್ಧಿ ಶೂನ್ಯವಾದೀತು. ನಾಲಗೆ ಸತ್ತುಹೋದೀತು. ಕಣ್ಣು ಕಾಣದೆ, ಕಿವಿ ಕೇಳದೆ ಹೋದೀತು ಆಗ ಯಾವ ಚಿಂತೆ ಮಾಡಿಯಾನು? ಇಂತಹವನು ಮುಂದೆ ದೊಡ್ಡ ಅಂಧಕಾರದಲ್ಲಿ ಬಿದ್ದಾನು. ಅವನ ಜೀವನ ವ್ಯರ್ಥವಾಗಿ ಹೋದೀತು. ಜೀವನದಲ್ಲಿ ಸತತವೂ ಪರಮಾತ್ಮನ ಧ್ಯಾನದಲ್ಲಿ ತೊಡಗಿದ್ದರೇನೆ ಅಂತ್ಯಕಾಲದಲ್ಲಿಯೂ ಅವನಿಗೆ ಭಗವಂತನ ಸ್ಮರಣೆ ಬಂದೀತು. ಅಂತಹವನಿಗೆ ಮಾತ್ರ ಮುಕ್ತಿ ದೊರಕುತ್ತದೆ. ಸತ್ಕಾರ್ಯದಲ್ಲಿ ತೊಡಗಿದವನು ಮುಂದಿನ ಜನ್ಮದಲ್ಲಿಯೂ ಸಹ ತನ್ನ ಕೃಷಿಯನ್ನು ಮುಂದುವರಿಸುತ್ತಾನೆ ಪ್ರಹ್ಲಾದನ ಕಥೆ ಇದಕ್ಕೆ ನಿದರ್ಶನವಾಗಿದೆ ಪೂರ್ವಜನ್ಮದ ಸಂಸ್ಕಾರವು ಅವನಿಗೆ ತುಂಬಾ ಸಹಾಯಕವಾಯಿತು. ತಾಯಿಯ ಗರ್ಭದಲ್ಲಿರುವಾಗಲೇ ಅವನಿಗೆ ನಾರದಮುನಿಯು ಉಪದೇಶ ಸಿಕ್ಕಿತು. ಹುಟ್ಟಿದಂದಿನಿಂದ ಹರಿಭಕ್ತನಾದನು. ತಂದೆಯು ಎಷ್ಟು ಮಹಾದಾಂಧನಾದರೂ ಮಗನಿಗೆ ಲೇಶಮಾತ್ರವೂ ತಂದೆಯ ಗುಣಗಳು ಬರಲಿಲ್ಲ. ತಂದೆ ತಾಯಿಗಳ ಗುಣವೇ ಮಕ್ಕಳಿಗೂ ಬರುತ್ತದೆಂಬ ಮಾತು ಸ್ವಲ್ಪ ಮಟ್ಟಿಗೆ ನಿಜವಾದರೂ ಪೂರ್ವ ಸಂಸ್ಕಾರ ಬಲವು ಮಹತ್ತರವಾಗಿದ್ದಕೆ ಇತರ ಸನ್ನಿವೇಶಗಳು ಮನುಷ್ಯನನ್ನು ಹೆಚ್ಚು ಬದಲಾಯಿಸಲಾಶವು.

ಭಾಗವತದಲ್ಲಿ ಅಜಾಮಿಳನ ಕಥೆ ಇದೆ. ಅವನ ಮರಣ ಕಾಲದಲ್ಲಿ 'ನಾರಾಯಣ' ಎಂದು ಹೆಸರು ಉಚ್ಚಾರಮಾಡಿದ್ದರಿಂದ ಅವನಿಗೆ ಮೋಕ್ಷ ಸಿಕ್ಕಿತೆಂದು ಹೇಳಿದೆ. ಅವನ ಜೀವನ ಚರಿತ್ರೆಯನ್ನು ಪೂರ್ಣವಾಗಿ ಓದಿದರೆ ಮಾತ್ರ ಇದರ ಅರ್ಥ ನಮಗೆ ಪೂರ್ಣವಾಗಿ ತಿಳಿಯುತ್ತದೆ. ಕರ್ಮ ಭ್ರಷ್ಟನಾಗಿ, ಕಾವ ಪಾಶದಲ್ಲಿ ಸಿಕ್ಕಿ ಬಿದ್ದು ಮತಿಗೆಟ್ಟಿದ್ದನಾದರೂ ಮರಣ ಕಾಲದಲ್ಲಿ ನಾರಾಯಣನ ಹೆಸರು ಇವನ ಬಾಯಲ್ಲಿ ಬಂದಿತೆಂದರೆ ಆಶ್ಚರ್ಯವಾದೀತು. ಇವನು ತನ್ನ ಜೀವನದ ಒಂದು ಕಾಲದಲ್ಲಿ ಮತಿಗೆಟ್ಟವನಾಗಿ, ಅನೇಕ ಪಾಪಕಾರ್ಯಗಳನ್ನು ಮಾಡಿದನು. ಆದರೂ ಸಹ ಇವನ ಹಿಂದಿನ ಸಂಸ್ಕಾರವು ಇವನನ್ನು ಉದ್ಧಾರ ಮಾಡಿತು. ಅಜಾಮಿಳನು ಶ್ರೇಷ್ಠ ಬ್ರಾಹ್ಮಣವಂಶದಲ್ಲಿ ಹುಟ್ಟಿ ಧರ್ಮನಿಷ್ಠನಾಗಿದ್ದನು. ಪರಮ ಜ್ಞಾನಿಯೂ ಆಗಿದ್ದನು. ಆದರೆ ಒಂದೂ ದಿನ ದೈವವಶಾತ್ ಒಬ್ಬ ನೀಚ ಕೆಣ್ಣಿನ ಮೋಹಪಾಶಕ್ಕೆ ಸಿಕ್ಕಿ ಇವನ ಅಧಃಪತನವಾಯಿತು. ಜಾತಿಭ್ರಷ್ಟನಾಗಿ ಅವಳ ಜೊತೆಯಲ್ಲಿಯೇ ಅನೇಕ ವರ್ಷಗಳ ಕಾಲ ದುರ್ವರ್ತನೆಯಲ್ಲಿಯೇ ಇದ್ದನು. ಇ

ಶ್ರೀ ಸಿ. ಎಂ. ಪೂಣಚ್ಚನವರೂ-ಅವರ ರಾಜಕೀಯವೂ.

ಲೇ:—'ಕೊಡಿಗಿನ ಕುವರ'

ತಾರೀಕ ೭-೮-೫೧ರ 'ಕೊಡಗು' ಪತ್ರಿಕೆಯಲ್ಲಿ ಕೇಂದ್ರ ಪಾರ್ಲಿಮೆಂಟಿನಲ್ಲಿ ಕೊಡಗಿನ ಪ್ರತಿನಿಧಿ ಶ್ರೀ ಸಿ. ಎಂ. ಪೂಣಚ್ಚನವರು ಕೊಡಗಿಗಾಗಿ ಮಾಡಿದ ಕೆಲಸ, ಕೊಡಗಿನ ಸುಧಾರಣೆಗಾಗಿ ಅವರು ಪ್ರಯತ್ನಗಳನ್ನು ವಿವರಿಸುವ ಲಾಲ ದೇಶಬಂಧು ಗುಪ್ತರ ಪತ್ರವನ್ನು ಓದಿ ನನಗೆ ಆಶ್ಚರ್ಯವಾಯಿತು. ನಮ್ಮ ಪ್ರತಿನಿಧಿಯೂದ ಶ್ರೀ ಪೂಣಚ್ಚನವರ ಕಾರ್ಯಕಲಾಪದ ವಿಚಾರ ನಮಗೇನೂ ತಿಳಿದಿರಲಾರದು. ಅದು ದರಿಂದ ದೇಶಬಂಧು ಗುಪ್ತರು ನನಗೆ ನಮ್ಮ ಪ್ರತಿನಿಧಿಯ ಪರಿಚಯ ಮಾಡಲೆತ್ನಿಸಿದ್ದಾರೆ. ಇವರು ಯಾವದೇ ದೃಷ್ಟಿಯಿಂದ ಈ ಪತ್ರವನ್ನು ಬರೆದಿದ್ದರೂ ಆ ಮಾತಿಗೆ ಕೊಡಗಿನವರು ಹೆಚ್ಚು ಪ್ರಾಶಸ್ತ್ಯ ಕೊಡಲಾರರು. ಬದಲಾಗಿ ನಮ್ಮ ಪ್ರತಿನಿಧಿಯೂದ ಶ್ರೀ ಪೂಣಚ್ಚನವರು ಈ ಐದಾರು ವರ್ಷಗಳಲ್ಲಿ ನಮ್ಮ ಹಿತಸಾಧನೆ ಹೇಗೆ ಮಾಡಿರುವರೆಂಬುದನ್ನು ಪರಿಶೀಲಿಸಬೇಕು. ಒಂದು ಲೇಖನ ಬರೆಯುವಾಗ ಒಬ್ಬ ವ್ಯಕ್ತಿಯ ವಿಚಾರ ಎತ್ತಿ ಬರೆಯುವುದು ಯೋಗ್ಯವಲ್ಲವೆಂಬುದು ನನಗೆ ಗೊತ್ತು. ಆದರೆ ಸಾರ್ವಜನಿಕ ರಂಗದಲ್ಲಿಳಿದು ಜನಮುಂದಾಳೆಂದು ದುಡಿಯುವವರ ಸಾರ್ವಜನಿಕ ಕಾರ್ಯಕಲಾಪಗಳ ವಿಚಾರ ಬಹಿರಂಗವಾಗಿ ಪ್ರಶಂಸಿಸುವ ಮತ್ತು ಟೀಕಿಸುವ ಹಕ್ಕು ಪ್ರತಿಯೊಬ್ಬ ನಾಗರಿಕನಿಗಿದೆ.

ಶ್ರೀ ಸಿ. ಎಂ. ಪೂಣಚ್ಚನವರು ರಾಜ್ಯ ಪುನಾ ಸಭೆಗೆ ಆಯ್ಕೆಪಟ್ಟಾಗ ದೇಶದಲ್ಲಿ ಹಲವರು ಅವರ ಆಯ್ಕೆಯು ಸಮರ್ಪಕವಲ್ಲವೆಂದು ಚಳವಳಿಯೆಬ್ಬಿಸಿದ್ದರು. ಕೆಲವರು ಡೆಲ್ಲಿಯ ವರೆಗೂ ದೂರು ಕೊಟ್ಟಿದ್ದರು. ಅಂದಿನ ಆ ಚಳವಳದ ಕಾಲಕ್ಕೆ ನಾನು ಆ ಪ್ರಯತ್ನವನ್ನು ನಿಷೇಧಿಸಿದವನು. ಏಕೆಂದರೆ ರಾಜ್ಯಪುನಾ ಸಭೆಗೆ ಕೊಡಗಿನಿಂದ ಯಾರು ಆಯ್ಕೆಪಟ್ಟರೂ ತಿವರು ಒಂದಲ್ಲ ಒಂದು ಪಕ್ಷದವರೇ ಆಗುವುದರಿಂದ ಪೂಣಚ್ಚನವರ ಆಯ್ಕೆಯು ನಂತರ ರನ ಸ್ಥಿತಿಯೇ ಬರುತ್ತಿತ್ತು. ಆದರೆ ಪೂಣಚ್ಚನವರು ಶಾಸನ ಸಭೆಯಲ್ಲಿ ಸ್ಪಷ್ಟವಾಗಿ ತನ್ನ ಧೋರಣೆಯನ್ನು ನಿಷ್ಕರ್ಷಗೊಳಿಸಿದ ಮೇಲೂ ಅವರ ಆಯ್ಕೆಗೆ ವಿರೋಧ ಮಾಡುತ್ತಿದ್ದವರ ವಾದವನ್ನು ಪೆಚ್ಚಾದವ ಳ್ಳಿ ನಾನೊಬ್ಬನು. ಕೊಡಗಿನ ಭವಿಷ್ಯ ನ ಮಟ್ಟಿಗೆ ತಾನು ಕೇಂದ್ರ ಸರಕಾರಕ್ಕೆ ಯಾವದೇ ಅಭಿಪ್ರಾಯವನ್ನು ವ್ಯಕ್ತಿಗತವಾಗಿ ಕೊಡುವದಲ್ಲವೆಂದೂ ಕೊಡಗಿನ ಭವಿಷ್ಯ ನಿರ್ಣಯವು ಕೊಡಗಿನ ಜನರ ಅಭಿಪ್ರಾಯ ತೆಗೆದೇ ಆಗಬೇಕೆಂದು ಹೇಳುವೆನೆಂದೂ ಅವರು ಭರವಸೆ ಕೊಟ್ಟಿದ್ದರು. ಆವರು ಈ ಭರವಸೆಯಂತೆ ನಡೆದಿರುವರೋ ಎಂಬುದನ್ನು ಪರಿಶೀಲಿಸಿ ನಾವು ನಿರ್ಣಯಕ್ಕೆ ಬರುವುದು ಯುಕ್ತವಲ್ಲದೆ ಗುಪ್ತರವರು ಬರೆದರೆಂದು ಪೂಣಚ್ಚನವರನ್ನು ಎತ್ತಿ ಏಡಿಯುವುದಾಗಲೀ, ಮತ್ತೊಬ್ಬರು ತೆಗಳಿದರೆಂದು ಅವರನ್ನು ಕೆಳಗೆ ತಳ್ಳುವುದಾಗಲೀ ಸರಿಯಲ್ಲ.

ನಮ್ಮ ಪ್ರತಿನಿಧಿಯೂದ ಶ್ರೀ ಪೂಣಚ್ಚನವರು ಈ ಕಳೆದ ಆರು ವರ್ಷಗಳಲ್ಲಿ ತಾನು ಡೆಲ್ಲಿಯಲ್ಲಿ ಮಾಡಿದ ಕಾರ್ಯಕಲಾಪಗಳನ್ನು ಅವರನ್ನು ಚುನಾಯಿಸಿದವರಾದ ನಮ್ಮ ಮುಂದಿಡಲಿಲ್ಲ. ೧೯೪೮ರಲ್ಲಿ ಚೀಫ್ ಕಮಿಷನರ್ ಪ್ರಾಂತಗಳಿಗೆ ಎಡ್‌ಹಾಕ್ ಸಮಿತಿಯೊಂದನ್ನ ರಚಿಸಿದಾಗ ಆ ಸಮಿತಿಯು ಮಾಡಿದ ಶಿಫಾರಸ್ಸುಗಳ ವಿಚಾರ ಅವರು ಬರೆದ ಲೇಖನ ಮತ್ತು ನಂತರ ಕಳೆದ ಮೂರ್ ತಿಂಗಳಲ್ಲಿ ಒಮ್ಮೆ ಅವರು ಮಾಡಿದ ಭಾಷಣ ಮಾತ್ರ ಪ್ರಕಟನವಾಗಿತ್ತು. ಇವುಗಳನ್ನು ನಾನು ಓದಿದ್ದೇನೆ. ಪೂಣಚ್ಚನವರು ನಮ್ಮ ಪ್ರತಿನಿಧಿಯಾಗಿ ಕೇಂದ್ರದಲ್ಲಿರುತ್ತಿದ್ದು ಅವರು ಕೊಡಗಿಗೆ ಸಂಬಂಧಿಸಿದ ವಿಚಾರದಲ್ಲಿಯೂ ಭಾರತಕ್ಕೆ ಸಂಬಂಧಿಸಿದ ಇತರ ವಿಚಾರಗಳಲ್ಲಿಯೂ ಭಾಗವಹಿಸಿದ್ದಾರೆ. ಆದ್ದರಿಂದ ಅವರು ಕೊಡಗಿನ ಬಗ್ಗೆ ಮಾಡಿದ ಕೆಲಸ ಮತ್ತು ಕೇಂದ್ರದಲ್ಲಿರುವವರ ಅಭಿಪ್ರಾಯ ಇವುಗಳನ್ನು ನಮಗೆ ಆಗಿಂದಾಗ್ಗೆ ತಿಳಿಸುವುದು ಕರ್ತವ್ಯವಿತ್ತು. ಇದೇ ಅಲ್ಲ; ಕೊಡಗಿನವರ ಅಪಕ್ಕೆ ಕೇವಲ ಕೊಡಗಿಗಷ್ಟೇ ಅಲ್ಲ. ಹಾಗಿರುವಾಗ ಕೊಡಗಿನ ಪ್ರತಿನಿಧಿಯು ಆಗಿಂದಾಗ್ಗೆ ಭಾರತ ಸರಕಾರದ ಮುಂದಿದ್ದ ಮಹಾ ಸಮಸ್ಯೆಗಳ ವಿಚಾರ ನಮಗೆ ಅರುವಿಕೆ ಕೊಡಬೇಕಿತ್ತು. ಆದರೆ ಅವರು ಇದಾವುದನ್ನೂ ಮಾಡದ್ದರಿಂದ ಕೊಡಗಿನವರಾದ ನಾವು ಕತ್ತಲಲ್ಲಿ ಜೀವಿಸುವಂತಿದೆ. ಇವರು ಆಗಾಗ್ಗೆ ಬಂದು ಕೊಡಗಿನಲ್ಲಿ ಭಾಷಣಗಳನ್ನು ಏರ್ಪಡಿಸುವುದು ಪ್ರಯೋಜನವಾದರೂ ಸ್ಥಳೀಯ ಪತ್ರಿಕೆಗಳಲ್ಲಿ ಆಗಾಗ ಬರೆಯುಬಹುದಿತ್ತು. ಇದು ಪೂಣಚ್ಚನವರ ಒಂದು ಕರ್ತವ್ಯ ಚ್ಯುತಿ ಎನ್ನಬೇಕಾಗುತ್ತದೆ.

ಪೂಣಚ್ಚನವರು ಕೊಡಗಿನವರಿಗೆ ಕೊಟ್ಟ ಭರವಸೆಯನ್ನು ಪಾಲಿಸಿದರೇ? ಚೀಫ್ ಕಮಿಷನರ್ ಪ್ರಾಂತಗಳ ಎಡ್‌ಹಾಕ್ ಸಮಿತಿಯು ಸದಸ್ಯರಾಗಿ ಇವರು ಸಲ್ಲಿಸಿದ ಶಿಫಾರಸ್ಸಿನಲ್ಲಿ ಇಂದಲ್ಲ ನಾಳೆ ಕೊಡಗು ಬೇರೆ ಪ್ರಾಂತದೊಡನೆ ವಿಲೀನಗೊಳ್ಳಬೇಕಿರುವುದರಿಂದ ಅದಕ್ಕೆ ರಾಜ್ಯ ಪುನಾ ಸಭೆಯಲ್ಲಿ ಅನು ಮಾಡಬೇಕೆಂದು ಸೂಚಿಸಿರುವರು. ಕೊಡಗಿನ ಭವಿಷ್ಯದ ಬಗ್ಗೆ ಜನರ ಅಭಿಪ್ರಾಯ ತೆಗೆಯುವಂತೆ ಕೇಳಿಕೆ ನೆಂದೂ ತನ್ನ ಸ್ವಂತ ಅಭಿಪ್ರಾಯವನ್ನು ಕೊಡೆನೆಂದೂ ಹೇಳಿದ್ದು ಪೂಣಚ್ಚನವರು ಈ ಅಭಿಪ್ರಾಯವನ್ನು ಕೊಡಲು ಕಾರಣವೇನು? ಇವರು ಕೊಡಗಿನ ಜನರ ಅಭಿಪ್ರಾಯ ತೆಗೆದಿರುವರೇ? ಹಾಗೆ ತೆಗೆಯಲು ಯಾವ ಪ್ರಯತ್ನ ಮಾಡಿದ್ದಾರೆ?

ಮತ್ತೆ ಕೊಡಗಿನ ವಿಚಾರ ಕೇಂದ್ರ ಸಭೆಯಲ್ಲಿ ಚರ್ಚೆಗೆ ಬಂದಾಗ ಹಲವು ಸದಸ್ಯರು ಕೊಡಗನ್ನು ನೆರೆ ಪ್ರಾಂತದೊಡನೆ ವಿಲೀನಗೊಳಿಸಬೇಕೆಂದು ಕೂಗಿದಾಗ ಇವರು ಯಾವುದೇ ನಿರ್ಣಯವಾಗಬೇಕಾದರೆ ಕೊಡಗಿನ ಜನಾಭಿಪ್ರಾಯವನ್ನು ತೆಗೆದು ಮಾಡುವುದೊಳಿತೆಂದು ಎಲ್ಲಿಯಾದರೂ ಸೂಚಿಸಿರುವರೆ? ಶಾಸನ ಸಭೆಯಲ್ಲಿ ಗೋಪಾಲಸ್ವಾಮಿ ಅಯ್ಯಂಗಾರರು ಕೊಡಗು ಇಂದಲ್ಲ ನಾಳೆ ಬೇರೆ ಪ್ರಾಂತದೊಡನೆ ವಿಲೀನವಾಗಬೇಕಾಗುವುದೆಂದು ಹೇಳಿದಾಗ ಅದನ್ನು ವಿರೋಧಿಸಿ ಅದು ಅಲ್ಲಿಯ ಜನರ ನಿರ್ಧಾರದಂತೆ ಆಗಬೇಕೆಂದು ಇವರು ಏಕೆ ಹೇಳಲಿಲ್ಲ? ಇವರು ಕೊಡಗಿನ ಜನರಿಗೆ ಕೊಟ್ಟ ಭರವಸೆಯನ್ನು ಯಾವ ರೀತಿ ಪಾಲಿಸಿದ್ದಾರೆ? ಅಂಥಾ ಚರ್ಚೆ ಕೇಂದ್ರ ಶಾಸನ ಸಭೆಯಲ್ಲಿ ಬರುವುದೆಂದು ತಿಳಿದಾಗ ಮೊದಲೇ ಬಂದು ಕೊಡಗಿನಲ್ಲಿ ಸಭೆ ನಡೆಸಿ ಸ್ಥೂಲವಾಗಿಯಾದರೂ ಇವರು ಜನಾಭಿಪ್ರಾಯವನ್ನು ತಿಳಿದರೇ? ಕೊಡಗಿನ ಭವಿಷ್ಯದ ವಿಚಾರದಲ್ಲಿ ವ್ಯಕ್ತಿಗತ ಅಭಿಪ್ರಾಯವನ್ನು ಕೊಡಲಾರೆನೆಂದ ಇವರು ಕೊಡಗಿನ ಭವಿಷ್ಯವನ್ನು ಕೇಂದ್ರ ಸರಕಾರವೇ ಜನರನ್ನು ಕೇಳದೆ ತೀರ್ಮಾನಿಸಿ ಬಿಡಬೇಕೆಂದು ಒತ್ತಾಯ ಮಾಡಿಲ್ಲವೇ? ತಾ. ೧೬-೩-೫೧ರಲ್ಲಿ ಇವರು ಮಾಡಿದ ಭಾಷಣದಲ್ಲಿಯೇ ಅದು ಸ್ಪಷ್ಟವಿಲ್ಲವೇ? ಕೊಡಗಿನ ಭವಿಷ್ಯದ ವಿಚಾರದಲ್ಲಿ ಭಿನ್ನಾಭಿಪ್ರಾಯವಿದ್ದರೆ ಅದು ಕೇಂದ್ರ ಸರಕಾರವು ನಿರ್ದಿಷ್ಟವಾದ ತೀರ್ಮಾನವನ್ನು ಕೊಡದ ಕಾರಣದಿಂದ ಎಂದು ಇವರು ಹೇಳಲಿಲ್ಲವೇ? ಹಾಗಿರುವಾಗ ಜನತಾ ಅಭಿಪ್ರಾಯದಂತೆ ಭವಿಷ್ಯ ನಿರ್ಣಯವಾಗಬೇಕೆನ್ನುವ ಇವರ ಭರವಸೆ ಎಲ್ಲಿ?

ಮತ್ತೆ ಇವರು ಕೊಡಗಿನ ಸುಧಾರಣೆಗಾಗಿ ಪ್ರಯತ್ನಿಸಿದ್ದಾರೆ. ಅವರಿಂದಾಗಿಯೇ ಸುಧಾರಣೆ ಬಂತೆಂಬ ಪ್ರಚಾರ ನಡೆಯುತ್ತಿದೆ. ಇದಕ್ಕೆ ಗುಪ್ತಾರವರ ಶಿಫಾರಸ್ಸು ಪತ್ರವನ್ನು ಜನರ ಮುಂದಿರಿಸಿದ್ದಾರೆ. ಕೊಡಗಿನ ಜನರಿಗೆ ಗುಪ್ತಾರವರ ಶಿಫಾರಸ್ಸಿನ ಪತ್ರದ ಅಗತ್ಯವೇನಿದೆ? ಕೊಡಗಿನ ಜನರಿಗೆ ತಮ್ಮ ಪ್ರತಿನಿಧಿಯ ಮಾತಿನ ಮೇಲೆ ವಿಶ್ವಾಸವಿಲ್ಲವೆಂದು ಪೂಣಚ್ಚನವರು ಬಗೆದು ಈ ಪತ್ರ ಬರೆಸಿದರೆ ಅದಕ್ಕೆ ವಿಷಾದ ಪಡಬೇಕಿದೆ. ತಾನು ಮಾಡಿದ ಕೆಲಸ ಕಾರ್ಯಗಳನ್ನು ವಿವರಿಸಿ ಕೊಡಗಿನ ಜನತೆಯನ್ನು ತೃಪ್ತಿ ಪಡಿಸುವ ಕೆಲಸ ಪೂಣಚ್ಚನವರದು. ಅದಕ್ಕೆ ಬೇಕಾದ ಯೋಗ್ಯತೆ ಅವರಲ್ಲಿದೆ. ಹೀಗಿದ್ದೂ ಗುಪ್ತಾರವರ ಸರ್ಟಿಫಿಕೇಟು ತೋರಿಸುವ ಅವರ ನೀತಿ ಪ್ರಶಂಸನಾರ್ಹವಾಗಿಲ್ಲ. ಜನತೆ ತನ್ನ ಮಾತನ್ನು ನಂಬಲಿಕ್ಕಿಲ್ಲವೆಂಬ ಸಂಶಯ ಅವರಿಗೇ ಬಂದಿದ್ದೆಂತೆ ಅದು ಕೊಡಗಿನ ಜನತೆಯ ತಪ್ಪಲ್ಲ. ಬದಲು ಶ್ರೀ ಪೂಣಚ್ಚನವರ ಕರ್ತವ್ಯಚ್ಯುತಿಯ ಪ್ರಭಾವ.

ಪೂಣಚ್ಚನವರು ಪಾರ್ಲಿಮೆಂಟಿನಲ್ಲಿ ಮಾಡಿದ ಭಾಷಣವನ್ನು ಕೇಳಿ ಮುಂಕ್ರಿಗಾಡ್ಗಿಲ್ಲರು ಪೂಣಚ್ಚನವರು ತಮ್ಮ ಭಾಷಣದಿಂದ ಕೊಡಗಿನವಿಲೀನೀಕರಣವು ಅವಶ್ಯವೆಂಬುದನ್ನು ಶೃತಪಡಿಸಿರುವರೆಂದಿದ್ದರು. ಮತ್ತೆ ಪೂಣಚ್ಚನವರು ತಾನು ಹಾಗೆ ಹೇಳಲಿಲ್ಲವೆಂದರು. ಅವರಿಗೆ ಮಾತಾಡಲು ದೊರೆತಿದ್ದ ಹತ್ತು ನಿಮಿಷಗಳಲ್ಲಿ ಕೊಡಗಿಗೆ ಸಂಪೂರ್ಣ ಜವಾಬ್ದಾರಿ ಸರಕಾರ ಬೇಕು ಎಂದು ಹೇಳಲು ತೊಂದರೆ ಇರಲಿಲ್ಲ. ಬದಲು ಅವರು ಹೇಳಲಿಲ್ಲ. ಆವರ ಭಾಷಣದ ವಿಚಾರ 'ಫ್ರೀ ಇಂಡಿಯಾ' ಎಂಬ ಪತ್ರಿಕೆಯ ಡೆಲ್ಲಿ ಪ್ರತಿನಿಧಿಯು ಆ ಪತ್ರಿಕೆಯು ತಾ. ೯-೯-೫೧ರ ಸಂಚಿಕೆಯಲ್ಲಿ ಬರೆಯುತ್ತಾ "ಭೋಪಾಲ್ ಮತ್ತು ಕೊಡಗಿನ ಪ್ರತಿನಿಧಿಗಳು ನೆರೆಯ ಪ್ರಾಂತದೊಡನೆ ವಿಲೀನೀಕರಣಕ್ಕೆ ತೀವ್ರವಾಗಿ ವಾದಿಸಿದ್ದಲ್ಲದೆ (ಸುಧಾರಣಾ) ಯೋಜನೆಯ ಬಗ್ಗೆ ಒಂದಿಷ್ಟೂ ತಪ್ಪರ್ಥವಾಗಿಲ್ಲ" (Bhopal and Coorg, whose spokesmen vigourously put forward the plea of merger with the neighbouring State, were least satisfied with the bill) ಎಂದಿದ್ದಾರೆ. ಶ್ರೀ ಪೂಣಚ್ಚನವರು ತಾನು ಕೊಡಗಿನ ವಿಲೀನೀಕರಣದ ವಿಚಾರ ಮಾತಾಡಿರುವದಲ್ಲವೆನ್ನುವದಾದರೆ ಮೇಲಿನಂತೆ ಅಭಿಪ್ರಾಯ ವ್ಯಕ್ತಪಡಿಸಿದ ಗಾಡ್ಗಿಲ್ಲರಿಗೂ ಯಾ ಪತ್ರಿಕಾ ಪ್ರತಿನಿಧಿಗೂ ಬಹುಶಃ ಪೂಣಚ್ಚನವರ ಇಂಗ್ಲಿಷ್ ಅರ್ಥವಾಗಿರಲಾರದೆನ್ನೋಣವೇ?

ನ್ಯಾಯ, ನೀತಿ, ಸತ್ಯಗಳ ತಳಹದಿಯಲ್ಲಿದ ರಾಜಕೀಯವನ್ನು ಅನುಸರಿಸುವವರು ಶ್ರೀ ಪೂಣಚ್ಚನವರಾಗಲೀ ಯಾ ನೆಹರೂರವರಾಗಲೀ ಅದಕ್ಕೆ ತಕ್ಕ ಪ್ರತೀಕಾರವನ್ನು ಇಂದಲ್ಲ ನಾಳೆ ಹೊಂದಲೇ ಬೇಕಾಗುವುದು.

ವನಿಗೆ ಮರಣ ಕಾಲವು ಸಂಭವಿಸುತ್ತಾ ಬಂದಿತು. ಕಡೆಯ ಕಾಲದಲ್ಲಿ ಇವನಿಗೆ ಜ್ಞಾನೋದಯವಾಯಿತು. ತನ್ನ ಹಿಂದಿನ ಸ್ಥಿತಿಯು ನೆನಪಿಗೆ ಬಂದಿತು. ಅಷ್ಟು ಪವಿತ್ರ ಜೀವನವನ್ನು ನಡೆಸುತ್ತಿದ್ದ ತಾನು ಕಾಮಪೀಡಿತನಾಗಿ ಅದರ ಪಾಶಕ್ಕೆ ಕಟ್ಟುಬಿದ್ದು ಹೀನಸ್ಥಿತಿಗೆ ಬಂದುದು ಇವನಿಗೆ ಗೊತ್ತಾಯಿತು. ತನ್ನ ತಪ್ಪು ತನಗೆ ಕಡೆಯ ಕಾಲದಲ್ಲಿ ಅರಿವಾಯಿತು. ಇದಕ್ಕಾಗಿ ತುಂಬಾ ಪಶ್ಚಾತ್ತಾಪಪಟ್ಟನು. ಇದರಿಂದ ಪುನಃ ಮನಶುದ್ಧಿಯಾಯಿತು. ಕಡೆ ಕಾಲಕ್ಕೆ ಇವನಿಗೆ ದೇವರ ಸ್ಮರಣೆಯಾಯಿತು. ಇದು ಇವನ ಹಿಂದಿನ ಸಂಸ್ಕಾರದಿಂದಲೇ ಆದದ್ದು. ಆದುದರಿಂದ ಕಡೆ ಕಾಲದಲ್ಲಿ ಎಲ್ಲರೂ ದೇವರ ಹೆಸರು ಹೇಳಿ ಮೋಕ್ಷಗಳಿಸಬಹುದೆಂಬ ಭರವಸೆಯಿಂದ ಯಾರೂ ಇರುವ ಹಾಗಿಲ್ಲ. ತನ್ನ ಸಂಸ್ಕಾರವು ಒಳ್ಳೆಯದಾಗಿರಬೇಕು.

ಕೃತಜ್ಞತಾ ವಂದನೆ.

ತಾ. 2-9-51ರಲ್ಲಿ ಶಿವಾಧೀನರಾದ ಕಮಲಮ್ಮನಾದ ನನ್ನ ಪತಿ ಮತ್ತು ನನ್ನ ಅಣ್ಣಂದಿರಾದ ಹೆಚ್. ಎಂ. ಪುಷ್ಪಣ್ಣನವರ ವಿಯೋಗ ಕಾಲದಲ್ಲಿ ಹುಬ್ಬುತಃ ಬಂದೂ ಮತ್ತು ಪತ್ರಗಳ ಮೂಲಕವೂ ನನ್ನ ದುಃಖದಲ್ಲಿ ಭಾಗಿಗಳಾದ ಬಂಧು ಮಿತ್ರರುಗಳಿಗೆ ಪ್ರತ್ಯೇಕ ಪ್ರತ್ಯೇಕ ವಂದನೆ ತಿಳಿಸಲು ಅಸಾಧ್ಯವಾದ ಕಾರಣ ಈ ಮೂಲಕ ಅವರೆಲ್ಲರಿಗೂ ನನ್ನ ಹೃತ್ಪೂರ್ವಕ ವಂದನೆಗಳನ್ನು ಅರ್ಪಿಸುತ್ತೇವೆ.

ಪತ್ನಿ ಕಮಲಮ್ಮ ಮತ್ತು
ಹೆಚ್. ಎಂ. ಶಾಂತವೀರಪ್ಪ
ಸಹೋದರರು

ಕೊಡಗು

ಕಾ. ೨೧-೯-೧೯೪೭ನೇ ಶುಕ್ರವಾರ

ಹೊಸ ಕಾಂಗ್ರೆಸ್ ಕಾರ್ಯಕಾರಿ ಮಂಡಳಿ.

ಕಾಂಗ್ರೆಸ್ ಪ್ರೆಸಿಡೆಂಟರಾಗಿರುವ ಪಂಡಿತ ಜವಾಹರ್‌ಲಾಲ್ ನೆಹರೂರವರು ತಮ್ಮ ಕಾರ್ಯಕಾರಿ ಮಂಡಳಿಯ ಹೆಸರನ್ನು ಪ್ರಕಟಿಸಿರುವರು. ಶ್ರೀಗಳಾದ ಮೌಲನಾ ಆಝಾದ್, ಟಾಂಡನ್, ವಲ್ಲಭಭಾಯ್, ಮುರಾರಜಿ ದೇಸಾಯಿ, (ಖಜಾನ್ಜಿ) ಕಾಮರಾಜನಾಡರ್, ಶಂಕರ್‌ರಾವ್‌ದೇವ್, ಸಂಜೀವರೆಡ್ಡಿ, ನಭಕೃಷ್ಣಚೌಧರಿ, ಪ್ರತಾಪಸಿಂಗ್ ಕೈರನ್, ಬಿ ಎಸ್. ಹೀದೆ, ಗುಲ್‌ಝಾರಿಲಾಲ್‌ನಂದ, ಮೋಣಿಕ್ಯಲಾಲ್ ವರ್ಮ, ಮುನಿಸ್ವಾಮಿಪಿಳ್ಳೈ, ಲಾಲಬಹದೂರ್ ಶಾಸ್ತ್ರಿ ಮತ್ತು ಯು. ಶ್ರೀನಿವಾಸ ಮಲ್ಯ (ಕಡೆಯ ಇಬ್ಬರೂ ಕಾರ್ಯದರ್ಶಿಗಳು.) ಇವರುಗಳು ಕಮಿಟಿಯಲ್ಲಿ ಇದ್ದಾರೆ. ಇನ್ನೂ ಐದು ಸ್ಥಳಗಳನ್ನು ತುಂಬಲು ಬಾಕಿ ಇದೆ. ಕೆಲವು ಪ್ರಾಂತೀಕ ಕಾಂಗ್ರೆಸ್ ಸಮಿತಿಗಳಿಗೂ, ವಹಿಳೆಯರಿಗೂ ಪ್ರತಿನಿಧ್ಯಕೊಡುವ ದೃಷ್ಟಿಯಿಂದ ಈ ಸ್ಥಳಗಳನ್ನು ತೆರವು ಇಡಲಾಗಿದೆ.

ನೆಹರೂರವರ ಈ ಹೊಸ ಕಾರ್ಯಕಾರಿ ಮಂಡಳಿಯಲ್ಲಿ ಬದಲಾವಣೆ ಇದ್ದರೂ ದೇಶವು ನಿರೀಕ್ಷಿಸಿದ್ದ ಕ್ರಾಂತಿಕಾರಕ ಬದಲಾವಣೆಗಳು ತೋರಿ ಬರುವದಿಲ್ಲ. ಶ್ರೀ ಶಂಕರರಾವ್ ದೇವ್, ಕಾಮರಾಜ ನಾಡರ್, ಪುರುಷೋತ್ತಮದಾಸ್ ಟಾಂಡನ್, ಸಂಜೀವರೆಡ್ಡಿ, ಮೊದಲಾದವರ ನೇಮಕವು ಹೊಸ ಪಥವನ್ನೇನು ತೋರುವಂತಿಲ್ಲ. ಕರ್ನಾಟಕದ ನಿಜಲಿಂಗಪ್ಪನವರ ಬದಲು ಶ್ರೀ ಶ್ರೀನಿವಾಸಮಲ್ಯರವರನ್ನು ಆರಿಸಿದ್ದು ಈ ಭಾಗದ ಈ ವರೆಗಿನ ಕಾಂಗ್ರೆಸ್ ನೀತಿಯ ಬಗ್ಗೆ ಹೆಚ್ಚಿನ ವ್ಯತ್ಯಾಸಕ್ಕೆ ಕಾರಣವಾಗದು.

ಮುಂಬರುವ ಚುನಾವಣೆಯ ದೃಷ್ಟಿಯಿಂದ ಇಂದು ಸಾರಲ್ಪಟ್ಟ ಹೆಸರುಗಳು ಸೂಕ್ತವೂ ಯೋಗ್ಯವೂ ಆಗಿದ್ದರೂ ಕಾಂಗ್ರೆಸ್ಸನ್ನು ಶುದ್ಧೀಕರಿಸಿ ಬಲಗೊಳಿಸುವ ದೃಷ್ಟಿಯಿಂದ ಆಗಬೇಕಿದ್ದ, ದೇಶವು ಬಯಸಿದ್ದ ಬದಲಾವಣೆ ಆಗಲಿಲ್ಲವೆನ್ನಬಹುದು. ಹೇಗೂ ಮುಂದೆ ಐದು ಹೆಸರುಗಳು ಪ್ರಕಟವಾಗಲಿವೆ. ನೆಹರೂರವರು ದೂರದೃಷ್ಟಿಯಿಂದ ಯೋಗ್ಯರನ್ನು ಈ ಸ್ಥಳಗಳಿಗೆ ಆರಿಸಿ ಕಾರ್ಯಕಾರಿ ಮಂಡಳಿಯು ಕೊಳಕು ತುಂಬಿದ ಕಾಂಗ್ರೆಸ್ ಸಂಸ್ಥೆಯನ್ನು ಪರಿಶುದ್ಧಗೊಳಿಸಿ, ಉನ್ನತ ಮಟ್ಟಕ್ಕೆ ತರಲು ಶಕ್ತವಾಗುವಂತೆ ಮಾಡುವರಾಗಿ ಆಶಿಸಲಾಗಿದೆ.

ವರ್ತಮಾನ.

ಕಳೆದ ಸ್ವಾತಂತ್ರ್ಯ ದಿನಾಚರಣೆಯು ಸಂದರ್ಭದಲ್ಲಿ ಮೈಸೂರಿನಲ್ಲಿ ಪ್ರೌಢ ಮತ್ತು ಮಾಧ್ಯಮಿಕ ಶಾಲೆಗಳ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗಾಗಿ ನಡೆಸಿದ ಸ್ಪರ್ಧೆ ಮತ್ತು ಕ್ರೀಡೆಗಳಲ್ಲಿ ಮೈಸೂರಿನ ಗರ್ಲ್ ಶೆಪರ್ಡ್ ಕಾನ್ವೆಂಟಿನ ಕುಮಾರಿ ಕೋಡಿರ ಬೆಟ್ಟಿ ಉತ್ತಪ್ಪನವರು ಹೈಸ್ಕೂಲಿನ ಛಾಂಪಿಯನ್‌ಷಿಪನ್ನೂ ಮತ್ತು ಕುಮಾರಿ ಕೊಡಂದೆರ ಸುಜ್ಜು ಕಾರ್ಯಪ್ಪನವರು ಮಿಡಲ್ ಸ್ಕೂಲಿನ ಛಾಂಪಿಯನ್‌ಷಿಪನ್ನೂ ಪಡೆದಿರುವರು.

ಪೊನ್ನಂಪೇಟೆ ಶ್ರೀರಾಮಕೃಷ್ಣ ಧರ್ಮ ಆಸ್ಪತ್ರೆಗೆ ರೂ. ೨೫೦ ಮತ್ತು ಅದರ ಮೇಲೆ ಧನ ಸಹಾಯ ಮಾಡಿದವರಿಗೆ ಆ ಹಣದ ಮೇಲೆ ಆದಾಯ ತೆರಿಗೆ ಹಾಕಲಾಗುವದಿಲ್ಲವೆಂದು ಕೇಂದ್ರ ಸರಕಾರವು ವಿನಾಯಿತಿ ಕೊಟ್ಟಿರುವದಾಗಿಯೂ ಸಾರ್ವಜನಿಕರು ಈ ಧರ್ಮ ಆಸ್ಪತ್ರೆಗೆ ಶುಂಬಾ ಸಹಾಯ ಮಾಡಬೇಕಾಗಿಯೂ ಸ್ವಾಮಿ ವಿಶ್ವಂಭರಾನಂದಜೀಯವರು ಆಫೀಲು ಮಾಡುತ್ತಾರೆ.

ಕೂಡಿಗೆ ವ್ಯವಸಾಯ ಕ್ಷೇತ್ರದ ದಿನಾಚರಣೆಯು ಸೆಪ್ಟಂಬರ್ ತಾ. ೨೨ನೇ ಶನಿವಾರ ಬೆಳಿಗ್ಗೆ ೧೦ ಗಂಟೆಯಿಂದ ಸಾಯಂಕಾಲ ೫ ಗಂಟೆಯ ವರೆಗೆ ಕೂಡಿಗೆ ವ್ಯವಸಾಯ ಕ್ಷೇತ್ರಗಳಲ್ಲಿ ಕೊಡಗು ಚೀಫ್ ಕಮಿಷನರವರ ಅಧ್ಯಕ್ಷತೆಯಲ್ಲಿ ಜರಗುವುದು. ಈ ದಿನಾಚರಣೆಯ ದಿನ ಎಲ್ಲಾ ತರದ ಬೆಳೆಗಳ, ತರಕಾರಿ ಮತ್ತು ಹಣ್ಣು ಹಂಪಲುಗಳ ಪ್ರದರ್ಶನವೂ ಸಹ ನಡೆಯುವುದು.

ಜಾಲಹಳ್ಳಿಯಲ್ಲಿರುವ ಕೊಡವರು ತಾ. ೯-೯-೪೭ ರಲ್ಲಿ ಹೇಸರುಗಟ್ಟೆ ಎಂಬಲ್ಲಿ ಕೈಲ್ ಮುಹೂರ್ತ ಹಬ್ಬವನ್ನು ಆಚರಿಸಿ, ಆಟೋಟಗಳ ಸ್ಪರ್ಧೆ ನಡೆಸಿ, ಸುತ್ತಲಿನ ಬಡ ಬಗ್ಗರಿಗೆ ಅನ್ನದಾನ ಮಾಡಿದರು. ನಂತರ ಶ್ರೀ. ಮೂಡೆರ ಐಯ್ಯಪ್ಪನವರ ಅಧ್ಯಕ್ಷತೆಯಲ್ಲಿ ಸಭೆ ನಡೆಸಿ ಬಹುಮಾನ ವಿತರಣೆ ಮತ್ತು ಭಾಷಣಗಳಾದವು.

ಮಂಗಳೂರಿನ ಕೊಡಗು ಸಂಘವು ಅಲೆನ್ ಫೆರ್ನಾಂಡಿಸ್ ಸ್ಮಾರಕ ಹಾಕಿ ಪಂದ್ಯಾಟವನ್ನು ಅಕ್ಟೋಬರ್ ಎರಡನೇ ವಾರದಲ್ಲಿ ನಡೆಸುವದೆಂದೂ ಕೊಡಗಿನಿಂದ ಟೀಮುಗಳನ್ನು ಆಹ್ವಾನಿಸಿರುವರೆಂದೂ ತಿಳಿಯಬಂದಿದೆ.

ತಾ. ೧೧-೯-೪೭ ರಲ್ಲಿ ಕುಂಜಿಲಗೇರಿ ಗ್ರಾಮದ ಮುಕ್ಕಾಟಿರ ಕುಟುಂಬಸ್ಥರು ಅಲ್ಲಿಯ ಭಗವತಿ ದೇವಸ್ಥಾನದಲ್ಲಿ ಶ್ರೀ. ಎಂ. ಗಣಪತಿಯವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಕೊಡಗಿಗೆ ಪ್ರಜಾಜವಾಬ್ದಾರಿ ಸರಕಾರ ದೊರೆತದಕ್ಕೆ ಕೇಂದ್ರ ಸರಕಾರವನ್ನು ವಂದಿಸುವ ಠರಾವು ಮಾಡಿದರು.

ಪೂನದ ಕೊಡವ ಸಭೆಯು ತಾ. ೨-೯-೪೭ ರಲ್ಲಿ ಗಣೇಶಕೀಂದ್ ಎಂಬಲ್ಲಿ ಕೈಲ್‌ಪೊಳ್ದ್ ಹಬ್ಬವನ್ನು ಆಟೋಟ ಸ್ಪರ್ಧೆಗಳಿಂದ ಆಚರಿಸಿತು.

ತಾ. ೨೪-೯-೪೭ಕ್ಕೆ ಇಟ್ಟಿಷ್ಟ ಹಾತೂರಿನ ಶ್ರೀ ಎಚ್. ಬಿ. ಸಿದ್ದಯ್ಯನವರ ಬಟ್ಟಿನ ಹಾಕಿ ಪಂದ್ಯಾಟವು ತಾ. ೬-೧೦-೪೭ನೇ ಸೋಮವಾರದಿಂದ ಪ್ರಾರಂಭವಾಗುವುದೆಂದೂ, ಅದರ ಟ್ರೈಸ್ ಡ್ರಾ ಮಡಿಕೇರಿಯಲ್ಲಿ ತಾ. ೨೮-೯-೪೭ ರಲ್ಲಿ ನಡೆಯುವದೆಂದೂ ತಿಳಿಯುತ್ತೇವೆ.

ವೀರಾಜಪೇಟೆ ಕೊಡವ ಸಮಾಜದ ವಾರ್ಷಿಕ ಮಹಾಸಭೆಯು ತಾ. ೫೦-೯-೪೭ನೇ ಆದಿತ್ಯವಾರ ದಿನ ಮಹಿಳಾ ಸಮಾಜದ ಕಟ್ಟಡದಲ್ಲಿ ನಡೆಯುತ್ತದೆ ಆಟ ಓಟಗಳ ಸ್ಪರ್ಧೆಯೂ ಊಟದ ಏರ್ಪಾಡೂ ಸಹ ಇದೆ.

ಸಂಯೋಜನಾ ಪಕ್ಷದೊಳಗೆ ಘರ್ಷಣೆ.

ಕಾ. ೧೦-೯-೪೭ ರಲ್ಲು ಗೋಣಿಕೊಪ್ಪಲಲ್ಲಿ ಸಂಯೋಜನೆ ಪಾರ್ಟಿಯವರು ನಡೆಸಿದ ವಿಚಿತ್ರಗಿನ ಸಾರಂಶ.

ಕಾರ್ಯಕ್ರಮ ಪಟ್ಟಿಯನ್ನು ಅನುಸರಿಸಿ ಅಧ್ಯಕ್ಷರಾದ ಶ್ರೀ ಕೊಳ್ಳಿಮಾಡ ಕರುಂಬಯ್ಯನವರು ತಮ್ಮ ಸ್ವಾಗತ ಭಾಷಣ ಮಾಡಿ ಶ್ರೀ. ಸಿ. ಎಂ. ಪೂಣಚ್ಚನವರು ಪಾರ್ಲಿಮೆಂಟಿನಲ್ಲಿಯ ಕಾರ್ಯಕಲಾಪಗಳನ್ನು ವಿವರಿಸುವಂತೆ ಕೇಳಿಕೊಂಡರು.

ಶ್ರೀ. ಪೂಣಚ್ಚನವರು ಹಿಂದೂಸ್ಥಾನದಲ್ಲಿ ಕಂಪೆನಿ ಸರಕಾರವು ಸ್ಥಾಪಿತವಾದಲ್ಲಿಂದ ೧೯೪೭ರ ವರೆಗೆ ದೇಶದಲ್ಲಿ ನಡೆದ ವಿಷಯಗಳನ್ನೂ ನಂತರ ಸ್ವತಂತ್ರಶಿದೊರೆಯಲು ಮಾಡಿದ ಸಹಾಸಕಾರ್ಯಗಳನ್ನೂ ವಿವರಿಸಿದರು. ದೊಡ್ಡ ಪ್ರಾಂತ್ಯಗಳಿಗೆ ಸುಧಾರಣೆ ದೊರಕಿದರೂ ಸಿ. ಸ್ಟೇಟುಗಳಿಗೆ ಸಿಕ್ಕದ ಕಾರಣ ಅದರ ಪ್ರತಿನಿಧಿಗಳು ಹೋರಾಡಿದುದರ ವಿಷಯ ಒಂದು ಕಾಲುಗಂಟೆ ವರೆಗೆ ವಿವರಿಸಿದರು. ಸಿ. ಸ್ಟೇಟುಗಳಲ್ಲಿನ ಕಾಂಗ್ರೆಸಿಗರ ಹೋರಾಟದಿಂದ ಕೊಡಗಿಗೆ ಪ್ರಜಾಜವಾಬ್ದಾರಿ ಸರಕಾರ ದೊರಕಿದೆ. ಕೊಡಗಿನ ಕಾಂಗ್ರೆಸಿಗರು ಇನ್ನು ಮುಂದೆ ಏನು ಮಾಡಬೇಕೆಂದು ನಿರ್ಧರಿಸಬೇಕಾಗಿದೆ. ಕಾಂಗ್ರೆಸು ಕೊಟ್ಟಂತ ಈ ಸರಕಾರವನ್ನು ಜಯಪ್ರದವಾಗಿ ನಡೆಸಲು ಪ್ರತಿ ಕ್ಷೇತ್ರದಲ್ಲಿಯೂ ಕೊಡಗು ಕಾಂಗ್ರೆಸಿನ ಹುರಿಯಾಳುಗಳನ್ನು ನಿಲ್ಲಿಸಿ ಜಯಪಡೆದು ಆಡಳಿತವನ್ನು ಸುಗಮವಾಗಿ ನಡಿಸಬೇಕಾಗಿದೆಯೆಂದು ವಾತಾಡಿದರು.

ಈ ಸಮಯದಲ್ಲಿ ಶ್ರೀಗಳಾದ ಕೆ. ಮಲ್ಲಪ್ಪನವರು, ಎನ್. ಸೋಮಣ್ಣನವರು, ಸಿ. ಮಂದಣ್ಣನವರು ಅವರ ಮೂರು ನಾಲ್ಕು ಸ್ನೇಹಿತರೊಡನೆ ಸಭೆಗೆ ದಯಮಾಡಿಸಿದರು.

ನೆಹರು ಸರಕಾರದ ಮೇಲೆ ಈ ಸಭೆಗೆ ಪೂರ್ಣ ವಿಶ್ವಾಸವಿದೆ ಎಂಬ ಠರಾವು ಸರ್ವಸಮ್ಮತದಿಂದ ಮಂಜೂರಾಯಿತು.

ಮುಂಬರುವ ಚುನಾವಣೆಗೆ ಕೊಡಗಿನ ಕಾಂಗ್ರೆಸು ಪರ ಉಮೇದುವಾರರ ಅರ್ಜಿಯನ್ನು ಕೊಡಲು ಕ್ಷೇತ್ರ ನಿರ್ಣಯವಾಗದ್ದರಿಂದ ಇನ್ನೂ ಹೆಚ್ಚಿನ ಸಮಯವನ್ನು ಕೊಡಬೇಕೆಂದು ಎ ಐ. ಸಿ ಸಿಯನ್ನು ಕೆ. ಪಿ. ಸಿ. ಸಿ. ಯ ಮೂಲಕ ಕೇಳಿಕೊಳ್ಳಬೇಕೆಂದು ಠರಾವು ಮಂಜೂರಾಯಿತು.

ಕೊಡಗಿಗೆ ಪ್ರಜಾ ಜವಾಬ್ದಾರಿ ಸರಕಾರ ಕೊಟ್ಟ ಇಂಡಿಯಾ ಸರಕಾರಕ್ಕೆ ಈ ಸಭೆಯು ವಂದನೆಯನ್ನು ಅರ್ಪಿಸುತ್ತದೆ ಎಂಬ ಠರಾವನ್ನು ಅಧ್ಯಕ್ಷರು ಸೂಚಿಸಿದರು. ಮೇ. ಪೂಣಚ್ಚನವರು ಅನುಮೋದಿಸಿದರು.

ಡಾ. ನಂಜುಂಡೇಶ್ವರರವರು ಈ ಠರಾವನ್ನು ವಿರೋಧಿಸುತ್ತಾ ವಾತಾಡಿದುದರ ಸಾರಾಂಶ:-ಆದಿಯಿಂದಲೂ ನಾವೆಲ್ಲರೂ ಸಂಯೋಜನಾದಿಗಳು. ಅದಕ್ಕಾಗಿಯೇ ದೇಶದಲ್ಲಿ ವಾತ್ಸವಲ್ಲದೆ ಡೆಲ್ಲಿಯವರೆಗೆ ಹೋರಾಡಿದ್ದೇವೆ. ನಾವು ಕೇಳಿದ್ದೇನು? ದೊರೆತದ್ದೇನು? ಕೇಳಿದ್ದನ್ನು ಕೇಂದ್ರ ಸರಕಾರವು ಕೊಡಲಿಲ್ಲ. ಬೇಡದ್ದನ್ನು ಕೊಟ್ಟಿದೆ. ಕೊಟ್ಟಿರುವುದಾದರೂ 'ಎ' ಸ್ಟೇಟ್ಸ್‌ಗಳ ಸುಧಾರಣೆಗೆ ಸರಿಯಾಗಿರುವುದಿಲ್ಲ. ಇಂಥಾದ್ದನ್ನು ಕೊಟ್ಟದ್ದಕ್ಕೆ ವಂದಿಸುವುದೇ? ಕೊಟ್ಟದ್ದಾರೂ ಏನು? ಸೊಗಸಾದಬಂಡಿ, ಬಂಡಿಯನ್ನು ಎಳೆಯುವ ಕುದುರೆಯೂದರೋ ಕುಂಟು. ಇಂಥಾ ಕುಂಟು ಕುದುರೆಯು ಸೊಗಸಾದ ಬಂಡಿಯನ್ನು ಎಳೆಯುವುದು ಹೇಗೆ? ಪ್ರತ್ಯೇಕವಾದಿಗಳು ರಸ್ತೆಯ ಬಾಜಿನಲ್ಲಿ ಸಂತೆ ಮೊಳದಲ್ಲಿ ನಾಲ್ಕಾರು ಜನರು ಇರುವಲ್ಲಿ ವಂದನೆಗಳನ್ನು ಅರ್ಪಿಸುತ್ತಾ ಹೋಗಿರುತ್ತಾರೆ. ಹೀಗೆ ಅರ್ಪಿಸುವಾಗ ಶನಿವಾರಸಂತೆಯಲ್ಲಿ ಸಂಯೋಜನಾವಾದಿಯೂದ ಶ್ರೀ ಮೂರ್ತಿಯವರು ವಿರೋಧಿಸಿದ್ದಾರೆ. ಆದೇ ಮೂರ್ತಿಯವರು ಈ ಸಭೆಯಲ್ಲಿದ್ದಾರೆ. ಅವರ ಮುಂದೆ ಇಂಥಾ ವಂದನೆಗಳನ್ನು ಅರ್ಪಿಸಿದರೆ ಅವರಿಗೆ ಅವಮರ್ಯಾದೆ ಮಾಡಿದಂತೆ ಆಗುವುದಿಲ್ಲವೇ ಎಂದರು.

ಈ ಮಾತುಗಳನ್ನು ಅನುಮೋದಿಸುತ್ತಾ ಡಾ. ಆಶ್ರಣನವರು ಈ ರೀತಿ ಹೇಳಿದರು. ಕರ್ನಾಟಕದ ಏಕೀಕರಣಕ್ಕಾಗಿ ಮೊದಲಿನಿಂದಲೇ ಹೋರಾಡುತ್ತಿದ್ದೆವು. ಆ ಹೋರಾಟದ ಗುರಿಯನ್ನು ಸಾಧಿಸುವ ವರೆಗೆ ಸುಮ್ಮನಿರಲು ಸಾಧ್ಯವಿಲ್ಲ. ಕೊಡಗಿನ ಆರ್ಥಿಕ ಸ್ಥಿತಿಯು ತೃಪ್ತಿಕರವಲ್ಲ. ಬಡ್ಜೆಟ್ಟಿನಲ್ಲಿ ತೋರಿಸಿದ ಹಣವನ್ನು ಖರ್ಚು ಮಾಡದೆ ಇದ್ದುದರಿಂದ ಸ್ವಲ್ಪ ಉಳಿಕೆಯು ಕಂಡುಬರುತ್ತದೆ. ಈ ಉಳಿಕೆಯು ಒಂದೆರಡು ವರ್ಷಗಳಲ್ಲಿ ಖರ್ಚಾಗಬಹುದು. ನಂತರ ಬಡವರ ಮೇಲೆ ಹೆಚ್ಚಿನ ಕಂದಾಯ ಹಾಕದೆ ಬಡ್ಜೆಟ್ಟನ್ನು ಸರಿಕಟ್ಟಲು ಸಾಧ್ಯವಿಲ್ಲ. ನಾಳೆ ನಾಡಿದಾಗಿ ಕರ್ನಾಟಕದೊಳಗೆ ಸೇರಲೇಬೇಕು. ಇಂಥಾ ಸ್ಥಿತಿಯಲ್ಲಿರುವ ಕೊಡಗಿಗೆ ಜವಾಬ್ದಾರಿ ಸರಕಾರ ಕೊಟ್ಟುದಕ್ಕೆ ಅರ್ಥವಿಲ್ಲ. ಆದ್ದರಿಂದ ಠರಾವನ್ನು ವಿರೋಧಿಸುತ್ತೇನೆ. ಅಲ್ಲದೆ ಇನ್ನೂ ಒಂದೆರಡು ವಿಷಯ ಹೇಳಬಯಸುತ್ತೇನೆ.

ಈ ಠರಾವಿನ ವಿಷಯ ಚರ್ಚೆ ಆದ ನಂತರ ಆ ವಿಷಯಗಳನ್ನು ಹೇಳಲು ಅನುಮತಿ ಕೊಡುತ್ತೇನೆಂದು ಅಧ್ಯಕ್ಷರು ಅಂದರು.

ಮೇ. ಮಲ್ಲಪ್ಪನವರು ವಿರೋಧಿಸಿದುದರ ತಾತ್ಪರ್ಯ:-ಇಂಡಿಯಾ ಸರಕಾರಕ್ಕೆ ವಂದನೆಯನ್ನು ಅರ್ಪಿಸತಕ್ಕ ವಿಷಯವೇನಿಲ್ಲ. ಕಾರ್ಯಕ್ರಮ ಪಟ್ಟಿಯಲ್ಲಿಟ್ಟುದೂ ಸರಿಯಿಲ್ಲ. ಮತ್ತು ಅರ್ಥವೂ ಇಲ್ಲ. ಇಂಡಿಯಾ ಸರಕಾರವು ನಮಗೆ ಏನನ್ನೂ ಕೊಟ್ಟಿರುವುದಿಲ್ಲ. ಏನೂ ಕೊಡದೆ ಇರುವ ಸಂಕಾರವನ್ನು ವಂದಿಸುವುದು ಏಕೆ? ಕೊಡಗಿಗೆ ಜವಾಬ್ದಾರಿ ಸರಕಾರ ಕೊಟ್ಟದ್ದು ಪಾರ್ಲಿಮೆಂಟು. ಪಾರ್ಲಿಮೆಂಟಿಗೆ ವಂದಿಸುವುದರಲ್ಲಿ ಸ್ವಲ್ಪ ಅರ್ಥವಿದೆ. ಆದ್ದರಿಂದ ಈ ವಿಷಯವನ್ನು ಕಾರ್ಯಕ್ರಮ ಪಟ್ಟಿಯಿಂದ ವಜ ಮಾಡಬೇಕೆಂದು ನಾನು ಸೂಚಿಸುತ್ತೇನೆ.

ಮೇಲಿನ ಮೂವರಲ್ಲದೆ ಶ್ರೀಗಳಾದ ಎನ್. ಸೋಮಣ್ಣ, ಕೃಷ್ಣಮೂರ್ತಿ, ಕೆ. ನಂಜಪ್ಪ ಮತ್ತು ಗೋಪಾಲದಾಸರು ಸಹ ಠರಾವನ್ನು ವಿರೋಧಿಸಿ ವಾತಾಡಿದರು. ವಂದನೆಯನ್ನು ಅರ್ಪಿಸಲೇ ಬೇಕೆಂದು ಮೇಗಳಾದ ಕೊಂಗಾಂಡ ಗಣಪತಿಯವರು, ಮೂಡಿನೂಡ ನಂಜುಂಡನವರು ಮತ್ತು ತಡಿಯಂಗಡ ತಿಮ್ಮಯ್ಯನವರೆಂದರು.

ಸರಕಾರವೆಂದರೆ ಪಾರ್ಲಿಮೆಂಟೇ. ಪಾರ್ಲಿಮೆಂಟು ಅಂದರೆ ಸರಕಾರ. ಹೊಂದಕ್ಕೊಂದಕ್ಕೆ ಬೇಧವಿಲ್ಲ. ಇಂಡಿಯಾ ಸರಕಾರವೇ ನಮಗೆ ಜವಾಬ್ದಾರಿ ಸರಕಾರ ಕೊಟ್ಟದ್ದಾಗಿದೆ. ಡಾ. ನಂಜುಂಡೇಶ್ವರನವರು ಮತ್ತು ಡಾ ಆಶ್ರಣರವರು ವಿರೋಧಿಸಿದುದರ ಅರ್ಥ ನನಗಾಗುವುದಿಲ್ಲ. ಅವರ ಗುರಿಯು ಏನಿದೆಯೋ ನಾನು ಹೇಳಲಾರೆ. ಹೇಗೂ ಎಲ್ಲರೂ ಸವಧಾನ ತೆಗೆದುಕೊಂಡು ಈ ಠರಾವನ್ನು

ಮಂಜೂರು ಮಾಡಬೇಕೆಂದು ಮೆ. ಪೂಣಚ್ಚನವರು ಕೇಳಿಕೊಂಡರು.

ವಿರೋಧ ಮಾಡಿದವರು ಮೆ. ಪೂಣಚ್ಚನವರ ಸಮಾಧಾನದ ಮಾತಿಗೆ ಒಪ್ಪಲಿಲ್ಲ ಇಂಥ ಬಿಕ್ಕಟ್ಟಿನ ಸಮಯದಲ್ಲಿ ಮೆ ಎನ್. ಸೋಮಣ್ಣನವರು ಈ ಕೆಳಗಿನ ಠರಾವನ್ನು ಸಭೆಯ ಮುಂದಿಟ್ಟರು. "ಬೇಜವಾಬ್ದಾರಿ ಸರಕಾರವನ್ನು ತೆಗೆದು ಹಾಕಿ ಜವಾಬ್ದಾರಿ ಸರಕಾರವನ್ನು ಕೊಟ್ಟದ್ದುದರ ಉದ್ದಿಶ್ಯ ಇಂಡಿಯಾ ಪಾರ್ಲಿಮೆಂಟಿಗೂ, ಶ್ರೀ ಚೆಪ್ಪುಡೀರ ಪೂಣಚ್ಚನವರಿಗೂ ವಂದನೆಯನ್ನು ಈ ಸಭೆಯು ಅರ್ಪಿಸುತ್ತದೆ" ಈ ಠರಾವು ಸರ್ವಸಮ್ಮತದಿಂದ ಪಾಸಾಯಿತು.

ಕೊಡಗಿಗೆ ಜವಾಬ್ದಾರಿ ಸರಕಾರ ದೊರೆತದ್ದಕ್ಕಾಗಿ ತಕ್ಷಣ ದೊಡ್ಡ ಪ್ರಾಂತ್ಯದೊಡನೆ ಸೇರಲು ಈ ಸಭೆಯು ವಿರೋಧಿಸುತ್ತದೆ. ಆದರೆ ಕರ್ನಾಟಕ ಏಕೀಕರಣದ ವಿಷಯ ಬರುವಾಗ ನಮ್ಮ ಗುರಿಯನ್ನು ಸಾಧಿಸಲು ಎಲ್ಲರೂ ಸಿದ್ಧರಿರಬೇಕು ಎಂಬ ಠರಾವನ್ನು ಡಾ. ಆಸ್ಪಣ್ಣರವರು ತಂದರು. ಇದನ್ನು ಅನುಮೋದಿಸಿದ ನಂತರ ಶ್ರೀ. ಸೋಮಣ್ಣನವರು ಮತ್ತು ಶ್ರೀ. ಮಲ್ಲಪ್ಪನವರು ಈ ಠರಾವನ್ನು ಮುಂದರಿಸಿಡಬೇಕೆಂದು ಸೂಚಿಸಿದರು.

ಯಾವಾಗ ಈ ವಿಷಯವನ್ನು ತೆಗೆದುಕೊಳ್ಳುವುದು ಎಂದು ಹೇಳಬೇಕು. ಅಲ್ಲದೆ ಇದನ್ನು ರಿಕಾರ್ಡು ಮಾಡಬೇಕೆಂದು ಡಾ. ಆಸ್ಪಣ್ಣನವರು ಕೇಳಿಕೊಂಡರು.

ಚುನಾವಣೆಯ ಪ್ರಸಿದ್ಧ ಪತ್ರಿಕೆಯಲ್ಲಿ ನಮ್ಮ ಗುರಿಯನ್ನು ನಮೂದಿಸಿ, ಮತದಾರರಿಗೆ ತಿಳಿಸುವುದು ಎಂಬ ಠರಾವನ್ನು ಡಾ. ಆಸ್ಪಣ್ಣನವರು ತಂದರು.

ಚುನಾವಣೆಗೆ ಈ ಠರಾವು ತೊಂದರೆಯನ್ನು ತರುವುದಲ್ಲದೆ ಈ ಪಂಗಡಕ್ಕೆ ಕಷ್ಟವಾದೀತು. ಆದ್ದರಿಂದ ನಮ್ಮ ಹಿತದೃಷ್ಟಿಯಿಂದ ಇದನ್ನು ಡಾಕ್ಟರವರು ವಾಪಾಸು ತೆಗೆದುಕೊಳ್ಳಬೇಕೆಂದು ಶ್ರೀ. ಸೋಮಣ್ಣನವರು ಮತ್ತು ಕೆಲವರು ಕೇಳಿಕೊಂಡ ಮೇರೆ ವಾಪಾಸು ತೆಗೆದುಕೊಂಡರು.

ಕೊಡಗಿನಲ್ಲಿರುವ ಎರಡು ಪಂಗಡದವರನ್ನು ಒಂದುಗೂಡಿಸಲು ಒಂದು ಉಪಕಮಿಟಿಯನ್ನು ನೇಮಿಸಬೇಕು ಎಂಬ ಠರಾವನ್ನು ಡಾ. ಆಸ್ಪಣ್ಣನವರು ತಂದರು.

ಈ ರಾಜಿಯು ಮಾತು ನಡೆಯುವುದಿಲ್ಲ. ಶ್ರೀ. ಪಂಡ್ಯಂಡ ಬೆಳ್ಯಪ್ಪನವರು ಈ ದೇಶವನ್ನು ಸೂರ್ಯ ಚಂದ್ರರು ಇರುವವರೆಗೆ ಪ್ರತ್ಯೇಕವಾಗಿ ಇಡಬೇಕೆನ್ನುವವರು. ನಾವಾದರೋ ಸಮಯಪರತು ಸಂಯೋಜನೆ ಮಾಡಬೇಕೆನ್ನುವವರು. ಹೀಗಿರುವಲ್ಲಿ ರಾಜಿಯೂಗುವುದು ಹೇಗೆ ? ಇದು ಕೃಷ್ಣಸಂಧಾನವಾಗುವುದು ಖಂಡಿತವೆಂದು ವಿವರಿಸಿದ ನಂತರ ವಾಪಾಸು ತೆಗೆದುಕೊಂಡರು.

ಮೂರುವರೆ ಗಂಟೆಯಾದುದರಿಂದ ಎಲ್ಲರೂ ಊಟಕ್ಕೆ ಎದ್ದರು. ಊಟಕ್ಕೆ ಏಳುವ ಮೊದಲು ಅಧ್ಯಕ್ಷರು ಕಾಂಗ್ರೆಸಿನವರ ಚಂದಾವನ್ನು ಡಿಸೆಂಬರು ಒಳಗೆ ಕೊಡಬೇಕು. ಉಮೇದುವಾರರು ಈಗಲೇ ಕೊಡಬೇಕೆಂದು ಕೇಳಿಕೊಂಡರು.

ಊಟವಾದ ನಂತರ ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರ ಸಭೆ ಸೇರಿ ಉಮೇದುವಾರರನ್ನು ಕ್ಷೇತ್ರಕ್ಕನುಗುಣವಾಗಿ ನೇಮಿಸಿದರು.

ಹಾಜರಿದ್ದವ.

ಓದುಗರ ಓಲೆಗಳು

ಕೊಡಗಿನ ವ್ಯವಸಾಯ ಇಲಾಖೆಯವರಿಗೆ.

ನೀವು ಕೊಡಗಿನ ಜನರ ತಿಳುವಳಿಕೆ ಬಗ್ಗೆ ಕೊಯಮುತ್ತೂರು ಒಬ್ಬ ವ್ಯವಸಾಯಗಾರರ ಜಮೀ ಖರ್ಚಿನ ವಿಷಯವಾಗಿಯೂ, ಮತ್ತು ಭತ್ತ ಬೆಳೆಸಿದ ವಿಷಯವಾಗಿಯೂ ಪ್ರಕಟಿಸಿದ್ದು ಸರಿ. ಒಂದು ಏಕ್ರೆ ಭೂಮಿಗೆ ೬ ಗಾಡಿ ಭತ್ತ ಬೆಳೆಸಿದ್ದಾರೆಂದೂ ಆದರಿಂದ ನಿವ್ವಳ ಲಾಭ ಇಷ್ಟೆಂದೂ ಬರೆದದ್ದು ಸರಿ. ಆದರೆ ಈ ಕೆಳಗಿ ಪ್ರಶ್ನೆಗೆ ದಯವಾಡಿ ಜವಾಬುಕೊಡಿ. ಅವರಿಗೆ ಎಷ್ಟು ಭೂಮಿ ಇರುವುದು? ಸಾಲೆಪೈಲೋ ನೀಳೆನೀರಿನಿಂದ ಬೆಳೆದದ್ದೋ? ಈ ಭತ್ತ ಬೆಳೆಸಿದ್ದು ಒಂದೇ ಬೆಳೆ ಬೆಳೆಸಿಯೋ, ಅಲ್ಲ-೩ ಬೆಳೆಯಿಂದಲೊ? ಎಡನೆಯದಾಗಿ ನೀವು ನಿಮ್ಮ ಸಿಬ್ಬಂದಿಯನ್ನು ಇಟ್ಟುಕೊಂಡು ಕೊಡಗಿನಲ್ಲಿ ಎಷ್ಟು ವರ್ಷದಿಂದ ವ್ಯವಸಾಯ ಮಾಡುತಿದ್ದೀರಿ? ನಿಮಗೆ ಏಕ್ರೆಗೆ ಖರ್ಚಿಷ್ಟು? ಖರ್ಚ ಸೇರಿಸುವಾಗ ನಿಮ್ಮ ರೈಟರು ಮೊದಲಾದ ಆಫೀಸರುಗಳ ಎಲ್ಲಾ ಖರ್ಚು ಸೇರಿಸಬೇಕು. ನೀವು ೧ ಏಕ್ರೆಗೆ ಸರಾಸರಿ ಬೆಳೆಸಿದ ಬೆಳೆ ಎಷ್ಟು? ಒಳ್ಳೆ ಜಮೀನಿರುವ ಒಬ್ಬ ರೈತನು ಬೆಳೆಸಿದ ಬೆಳೆ ಎಷ್ಟು ? ನೀವು ಈಗ ಪೊನ್ನಂಪೇಟೆಯಲ್ಲಾ ಖರ್ಚು ಮಾಡಿದ ಹಣ ಎಷ್ಟು ? ನೀವು ಮಾಡುವ ಆರಂಭದ ಏಕ್ರೆ ಎಷ್ಟು; ನಿಮ್ಮ ಸಿಬ್ಬಂದಿ ಎಷ್ಟು ? ನಿಮಗೆ ವ್ಯವಸಾಯಕ್ಕೆ ಇರುವ ಸೌಕರ್ಯ, ನೀರು ಸೇದಲಿಕ್ಕೆ ಇಂಜಿನು, ಗೊಬ್ಬರ, ಆಳು ಇದೆಲ್ಲಾ ಇದ್ದರೂ ನಿಮ್ಮ ಆರಂಭ ಆಗದೆ ಇರಲಿಕ್ಕೆ ಕಾರಣ ಏನು?

ಡಿ. ಪಿ. ಬಿದ್ದಯ್ಯ.

ಹರಿಜನ ಉಮೇದಾರರು.

ಮುಂಬರುವ ಮಹಾ ಚುನಾವಣೆಗೆ ಕೊಡಗಿನಲ್ಲಿ ಹಿಂದುಳಿದವರಿಗೆಂದು ಅರು ಸ್ಥಳಗಳನ್ನು ಕೊಡಲಾಗಿದೆ ಎಂಬು ತಿಳಿದಿನು. ಆದರೆ ಕೊಡಗಿನಲ್ಲಿ ಹಿಂದುಳಿದವರಲ್ಲಿ ವಿದ್ಯಾವಂತರು ಕಡಿಮೆ ನಿಜ. ಆದರೆ ಐದು ಆಥವಾ ಒನೇ ಕ್ಲಾಸನ್ನು ಓದಿದವರನ್ನೂ ಓದುಬರಹ ಏನೂ ಗೊತ್ತಿಲ್ಲದ ಬರೇ ಒಂದು ಸೈನು ಹಾಕುವವರನ್ನೂ ಉಮೇದ್ವಾರಿಕೆಗೆ ನಿಲ್ಲಿಸುವ ವಾರ್ತೆ ಕೇಳಿದ್ದೇನೆ. ಹಿಂದುಳಿದ ಪಂಗಡದಲ್ಲಿ ಇದಕ್ಕಿಂತಾ ವಿದ್ಯಾವಂತರೂ ಯೋಗ್ಯರೂ ದೊರೆಯುತ್ತಾರೆ. ನಿಜವಾಗಿಯೂ ಇವನ್ನು ಸಮಾಜವು ಮುಂದೆ ಬರಬೇಕಾದರೆ ನಾವು ಆರಿಸುವ ವ್ಯಕ್ತಿಯು ಶ್ರಮವಹಿಸಿ ಕೆಲಸ ಮಾಡಬೇಕು? ಮೇಲೆ ಹೇಳಿದ ಉಮೇದ್ವಾರರು ಏನುಮಾಡಿಯಾರು? ಸರಕಾರದ ಹೇಳಿಕೆಗಳನ್ನೂ ಶಾಸನ ಸಭೆಯು ಕಾರ್ಯಕಲಾಪಗಳನ್ನೂ ತಿಳಿದುಕೊಳ್ಳುವದೇ ಕಷ್ಟ. ಆದುದರಿಂದ ಕೊಡಗಿನ ಮಹಾಶಯರಲ್ಲಿಯೂ ಮತ್ತು ಹರಿಜನ ಬಂಧುಗಳಲ್ಲಿಯೂ ನಾನು ಕೇಳಿಕೊಳ್ಳುವುದೇನೆಂದರೆ ಕೇವಲ ಹಿಂದುಳಿದವರಲ್ಲಿ ಉಮೇದಾರನಾಗಿ ಬರುವಂತ ವ್ಯಕ್ತಿಯು, ಕಡಿಮೆ ಪಕ್ಷ ಎಂಟನೆ ತರಗತಿಯ ವರೆಗಾದರೂ ಓದಿರುವಂತೆ ನೋಡಬೇಕು. ಹಾಗೆ ಮಾಡದಿದ್ದರೆ ಪ್ರಯೋಜನವಿಲ್ಲ. ಉದಾಹರಣೆಗೆ ಮಡಿಕೇರಿಯು ಮುನಿಸಿಪಾಲಟಿ ಕೌನ್ಸಿಲಿಗೆ ಒಬ್ಬ ಹರಿಜನ ವ್ಯಕ್ತಿಯನ್ನು ಆರಿಸಿರುವರೆಂದು ತಿಳಿದೆ ಆ ವ್ಯಕ್ತಿಯು ಇದುವರೆಗೆ ಹರಿಜನರಿಗೆ ಬೇಕಾದ ಠರಾವನ್ನಾಗಲೀ ಯಾ ಯಾವ ಒಂದು ಮಾತನ್ನಾಗಲೀ ಆ ಸಭೆಯಲ್ಲಿ ಆಡಿರುವರೆ? ಆಥವಾ ಕೌನ್ಸಿಲ್ ವೋಟಿಂಗಿಗೆ ಸಮಯಕ್ಕೆ ಸರಿಯಾಗಿ ಹಾಜರಿರುವರೇ? ಇದೇ ರೀತಿಯಲ್ಲಿ ನಮ್ಮ ರಾಜಸಭೆಗೆ ಆರಿಸಿಬರುವ ಉಮೇದ್ವಾರರು ಆದರೆ ದಲಿತ ವರ್ಗದವರಿಗೆಂದು ಕೂಟ್ಟಸೀಟಿನಿಂದ ಪ್ರಯೋಜನವೇನು? ಆದುದರಿಂದ ಮುಂಬರುವ ಚುನಾವಣೆಯಲ್ಲಿ ವಿದ್ಯಾವಂತರೂ, ಸುಗುಣ ಶೀಲವಂತರೂ, ದಕ್ಷರೂ ಆದವರನ್ನು ಮಾತ್ರ ಉಮೇದುವಾರರಾಗಿ ಆರಿಸಬೇಕಾಗಿ ಕೇಳಿಕೊಳ್ಳುತ್ತೇನೆ.

ಹೆಚ್. ಪಿ. ಕಾಳಪ್ಪ.

ಕೊಡಗು ಚೀಫ್ ಕಮಿಷನರವರಲ್ಲಿ ವಿನಂತಿ.

ಮುಂಬರುವ ಚುನಾವಣೆಗೆ ಏರ್ಪಡಿಸಿರುವ ಪೋಲಿಂಗ್‌ಸ್ಟೇಷನ್ ಪಟ್ಟಿಯನ್ನು ನೋಡಿದೆನು. ಅದರಲ್ಲಿರುವಂತೆ ಕುಂದ, ಈಚೂರು ಗ್ರಾಮಗಳ ಓಟರುಗಳು ಹಾತೂರಿಗೆ ಓಟು ಮಾಡಲಿಕ್ಕೆ ಹೋಗುವಂತೆ ಏರ್ಪಡಿಸಿದೆ. ಇದು ಆ ಗ್ರಾಮದ ಓಟರುಗಳಿಗೆ ತೀರಾ ಅನಾನುಕೂಲವಾಗಿದೆ. ಈಚೂರು ಮತ್ತು ಮುಗುಟಗೇರಿ ಗ್ರಾಮಗಳ ಒಂದು ಮೂಲೆಯಿಂದ ಐದು ಮೈಲಿ ಹೋಗಿ ಓಟು ಮಾಡಲು ಅಲ್ಲಿನ ಹೆಂಗಸರು ಮತ್ತು ಮುದುಕರಿಗೆ ಪೂರಾ ತೊಂದರೆಯಾಗುತ್ತದೆ. ಕುಂದ ಸ್ಕೂಲನ್ನು ಮೆಲಿನ ಗ್ರಾಮಗಳಿಗೆ ಒಂದು ಬತ್ತ ಸೆಂಟರಾಗಿ ಸರ್ಕಾರದವರು ಮಾಡಿದ್ದಾರೆ. ಹಾಗೆಯೇ ಕುಂದಾ ಶಾಲೆಯನ್ನು ಒಂದು ಪೋಲಿಂಗ್ ಸ್ಟೇಷನ್ನಾಗಿ ಮಾಡಬೇಕಾಗಿ ಚೀಫ್ ಕಮೀಷನರಲ್ಲಿ ವಿನಂತಿಸುತ್ತೇನೆ.

ಕುಂದಾ ಗ್ರಾಮದವರು.

ಕೊಡಗಿನ ಸಂಯೋಜನಾವಾದಿಗಳಿಗೆ ಒಂದು ಸಲಹೆ

ಕೊಡಗಿನ ಜನರು ಭಾರತದ ಸ್ವತಂತ್ರ ಸಂಗ್ರಾಮದಲ್ಲಿ ತಮ್ಮ ಹದ್ದು ಬೀರಿ ಸೇವೆಯನ್ನು ಸಲ್ಲಿಸಿದ್ದು ನಮಗೆಲ್ಲರಿಗೂ ತಿಳಿದ ವಿಷಯವೇ ಆಗಿದೆ. ಭಾರತಕ್ಕೆ ಸ್ವಾತಂತ್ರ್ಯ ಸಿಕ್ಕಿದ ಮೇಲೂ ಸಹ ಕಳೆದ ನಾಲ್ಕು ವರ್ಷಗಳಿಂದ ಕೊಡಗನ್ನು ಪ್ರತ್ಯೇಕವಾಗಿಟ್ಟುಕೊಳ್ಳಬೇಕೆಂದು ಮಾಡಿದ ಸಾಹಸವು ಒಂದುತರದಲ್ಲಿ ಪ್ರತ್ಯೇಕವಾದಿಗಳ ಅಹಿಂಸಾ ತತ್ವದ ಸಂಗತ್ಯವೇ ಆಗಿತ್ತು. ಹಾಗೂ ಹೀಗೂ ಕೊಡಗಿಗೆ ಪ್ರಜಾ ಜವಾಬ್ದಾರಿ ಸರ್ಕಾರವು ಕೊಡಲ್ಪಡುವುದೆಂದು ಮೊನ್ನೆ ತಾನೇ ಭಾರತದ ಅಧಿಕಾರ ವರ್ಗದ ಹಾಗೂ ಪಾರ್ಲಿಮೆಂಟಿನವರು ನಿರ್ಧರಿಸಿರುವುದು ಸ್ತುತ್ಯಾರ್ಹವಾಗಿದೆ. ಕೊಡಗಿನ ಸಂಯೋಜನಾವಾದಿಗಳು ಕೊಡಗು ಕೌನ್ಸಿಲಿನ ಹೊರಗೂ ಒಳಗೂ ಮತ್ತು ದಿ. ಸರ್ದಾರ್ ಪಟೇಲರಲ್ಲಿಯೂ ಸಹ ಎಷ್ಟೇ ಮೊರೆಯಿಟ್ಟರೂ, ಅವರ ಪ್ರಯತ್ನಗಳು ನಿಷ್ಫಲವಾದುದು ಕೊಡಗಿನ ಮತ್ತು ಕೊಡಗಿನ ಜನರ ಭಾಗ್ಯವೇ ಸರಿ.

ಸಂಯೋಜನಾವಾದಿಗಳು ತಮ್ಮ ಛಲವನ್ನು ಬಿಡದಿರಲಿ. ಆದರೆ ಮುಂದಿನ ಚುನಾವಣೆಯಲ್ಲಿ ಪ್ರತ್ಯೇಕವಾದಿಗಳಿಗೆ ಸ್ಥಳ ಬಿಟ್ಟುಕೊಟ್ಟು, ಮುಂಬರುವ ಐದು ವರ್ಷಗಳಲ್ಲಿ ಪ್ರತ್ಯೇಕವಾದಿಗಳಿಂದ ಸಾಧಿಸಲ್ಪಡಬಹುದಾದ ಆರ್ಥಿಕ, ನೈತಿಕ ಮತ್ತು ವ್ಯವಹಾರಿಕ ಅಭ್ಯುದ್ಧಿಗಳನ್ನು ಮನಗಂಡು ಅವುಗಳಲ್ಲಿ ಕೊಡಗಿನ ಜನತೆಗೆ ಹೆಚ್ಚು ಪ್ರಯೋಜನಗಳು ಲಭಿಸುವವೋ ಎಂಬುದನ್ನು ನೀತು ನೋಡಿ, ಪ್ರತ್ಯೇಕವಾದಿಗಳ ಲೋಪದೋಷಗಳನ್ನು ಕೊಡಗಿನ ಜನತೆಗೆ ಎತ್ತಿತೋರಿಸಿ ಕೊಡಗನ್ನು ಮುಂದಕ್ಕೆ ಪ್ರತ್ಯೇಕವಾಗಿಟ್ಟುಕೊಳ್ಳಲು ಸಾಧ್ಯವಿದೆಯೋ ಇಲ್ಲವೋ ಎಂಬುದನ್ನು ತೀರ್ಮಾನಿಸುವುದು ಸದ್ಯದ ಪರಿಸ್ಥಿತಿಯಲ್ಲಿ ಸಂಯೋಜನಾವಾದಿಗಳ ಕರ್ತವ್ಯವೆಂದು ನನಗನಿಸುತ್ತದೆ. ಹೀಗೆ ಮಾಡಿದರೆ ಸಂಯೋಜನಾವಾದಿಗಳ ಸ್ವಾರ್ಥತ್ಯಾಗವನ್ನು ಕೊಡಗಿನ ಜನ ಮೆಚ್ಚಿ ಅವರಲ್ಲಿ ಹೆಚ್ಚಿನ ಪ್ರೇಮವುಂಟಾಗಿ ಪ್ರತ್ಯೇಕವಾದಿಗಳೂ ಸಂಯೋಜನಾವಾದಿಗಳೂ ಪರಸ್ಪರ ಪ್ರೇಮದಿಂದ ಕಲೆತು ಕೊಡಗು ಪ್ರಾಂತ್ಯಕ್ಕೂ ಭಾರತ ಮಾತೆಗೂ ಕೀರ್ತಿ ಲಭಿಸುವುದೆಂದು ನನಗನಿಸುತ್ತದೆ.

ಪೊನ್ನಂಪೇಟೆ ನಾಡಿನವ.

ಇದು ಸರಿಯೆ ?

ಸೊಳ್ಳೆಗೆ ಡಿ. ಡಿ. ಟಿ. ಸ್ಪ್ರೆ ಮಾಡುವುದು ಮಲೇರಿಯಾ ನೌಕರರ ಕೆಲಸ. ಮಳೆಗಾಲದಲ್ಲಿ ಮಲೇರಿಯಾ ಸ್ಪ್ರೆಯರ್ ತೆಗೆದುಕೊಂಡು ಹೋಗಿ ಕಿತ್ತಳೆ ಗಿಡಕ್ಕೆ ಸ್ಪ್ರೆ ಮಾಡಿದಹೆಂದು ನಮ್ಮೂರಿನಲ್ಲಿ ಮಾತಿದೆ. ಇದು ನಿಜವಾದರೆ ಈ ಕೆಲಸಕ್ಕೆ ಕೊಡಗಿನ ವ್ಯವಸಾಯ ಇಲಾಖೆಯವರು ಇಲ್ಲವೆ? ಮಲೇರಿಯಾ ನೌಕರರಿಗೆ ಮಳೆಗಾಲದಲ್ಲಿ ಕೆಲಸವಿಲ್ಲದಿದ್ದರೆ ಆ ಸಮಯದಲ್ಲಿ ಅವರಿಗೆ ಬೇರೆ ಕೆಲಸದ ಏರ್ಪಾಡು ಮಾಡಲಾಗದೇ? ಸಂಬಂಧಪಟ್ಟ ಮೇಲಧಿಕಾರಿಗಳು ಗಮನಕ್ಕೆ ತೆಗೆಯದಿದ್ದರೆ ಈ ಇಲಾಖೆಯವರು ಮುಂಬರುವ ಕೊಡಗಿನ ಹುತ್ತರಿ ಹಬ್ಬಕ್ಕೆ ಈ ಸ್ಪ್ರೆಯರಿನಲ್ಲಿ ಗೋಡೆಗೆ ಸುಣ್ಣ ಬಳಿಯಲಿಕ್ಕೆ ಸುರು ಮಾಡಬಹುದೇನೊ!

ಚಾಣಕ್ಯ.

Commissions in Armed Forces.

Applications are invited from Intermediates between 18 and 21 and Matriculates age 15 and 17½ for Commission in the Armed Forces. For full particulars apply to the nearest Recruiting Office.

3-1

'ಗೌರವ ಕೆಲಸಗಳೂ-ಜವಾಬ್ದಾರಿಕೆಯೂ.'

ಲೇ:—'ಓರ್ವ ಭಕ್ತ'

ಶ್ರೀ. ಪಿ. ಜಿ. ಐಯಪ್ಪನವರು ತಾ. ೧೪-೯-೫೧ರ ಕೊಡಗು ಪತ್ರಿಕೆಯಲ್ಲಿ ಮುಜ್ರಾಯಿ ಇಲಾಖೆಯ ಪ್ರೆಸಿಡೆಂಟರು ಮತ್ತು ಮೆಂಬರುಗಳ ಕಾರ್ಯವರ್ತನೆಗಳನ್ನು ಟೀಕಿಸಿ ಬರೆದ ಲೇಖನವನ್ನು ನೋಡಲಾಯಿತು. ಪತ್ರಿಕೆಯಲ್ಲಿ ಪ್ರೆಸಿಡೆಂಟರು ಆಕ್ಕಿ ಪಡಿಕೊಡಲಿಕ್ಕೆ ಕೊಡಗು ದೇಶದ ಭಕ್ತಾದಿಗಳು ಧನ ಅಥವಾ ಧಾನ್ಯ ಅವರವರ ಶಕ್ತಿಯಾನುಸಾರ ಕೊಡಬೇಕೆಂದೂ ಕೇಳಿಕೊಂಡ ವಿನಂತಿ ನೋಡಿ ಅವರಿಗೆ ಆಶ್ಚರ್ಯವಾಯಿತಂತೆ. ಪತ್ರಿಕೆಯಲ್ಲಿ ನೋಡಿದ ಮಾತ್ರಕ್ಕೆ ಜನರು ಕಳುಹಿಸಿಕೊಟ್ಟಾರೆಂದು ನಾವು ಗ್ರಹಿಸುವುದು ಶುದ್ಧ ಭ್ರಾಂತಿಯೆನ್ನುವರು. ಪತ್ರಿಕೆಗಳಲ್ಲಿ ಪ್ರಕಟಿಸಿದರೆ ಸಾಲದು. ಮೆಂಬರುಗಳು ಖುದ್ದಾಗಿ ಹೋಗಿ ಮನೆ ಮನೆ, ದೇಶದಲ್ಲೆಲ್ಲಾ ತಿರುಗಿದರೆ ಬೇಕಾದಷ್ಟು ಸಂಗ್ರಹಿಸಬಹುದೆಂದು ಅವರು ಅಭಿಪ್ರಾಯಪಟ್ಟಿರುವರು. ಹೊತ್ತಿರುವ ಜವಾಬ್ದಾರಿ ಕೆಲಸಗಳನ್ನು ಪ್ರೆಸಿಡೆಂಟರೂ, ಕಮಿಟಿ ಮೆಂಬರುಗಳೂ ಮನಸಾಕ್ಷಿಯಾಗಿ ಲಾಭ ನಿರೀಕ್ಷಣೆಯಿಲ್ಲದೆ ಮಾಡಿದುದಲ್ಲದೆ ಈಗ ಭಿಕ್ಷಾಟನೆಗೆ ಬೇರೆ ಹೊರಡಬೇಕೆ? ಕಾವೇರಿಮಾತೆಯ ಮೇಲೆ ಭಕ್ತಿಯೂ, ಪ್ರೀತಿಯೂ ಇರುವವರು ವರ್ಷಕ್ಕೊಂದಾವರ್ತಿ ನಡೆಯುವ ಮಹಾಜಾತ್ರೆಗೆ ಯಾರೂ ಕೇಳದೆಯೇ ದಾನನೂಡಬೇಕು. ಕಾಮೆರ್ ಪೇಪರ್‌ವಿಲ್ಸ್, ಕಂರ್ಗ್ ಇಂಡಸ್ಟ್ರೀಸ್, ಕಂರ್ಗ್ ಟ್ರಾನ್ಸ್‌ಪೋರ್ಟ್ ಮತ್ತು ಎಲೆಕ್ಟ್ರಿಕ್ ಮೊದಲಾದ ಅನೇಕ ಕೆಲಸಗಳಿಗೆ ಷೇರುಗಳನ್ನಿಟ್ಟು ಪ್ರಕಟಿಸಿ ವಿನಂತಿಸಿದುದಕ್ಕೆ ಜನರಿಂದ ಸಾವಿರಗಟ್ಟಲೆ ಹಣ ಶೇಖರಿಸಿದ್ದು ಶ್ರೀ. ಐಯ್ಯಪ್ಪನವರು ತಿಳಿದುದಿಲ್ಲವೇ? ಇದಕ್ಕೆ ಅವರಾಗಲೀ ಶ್ರೀಯುತ ದೊಡ್ಡವೀರಪ್ಪನವರಾಗಲೀ, ಬೇರೆ ಏಜಂಟರಾಗಲೀ ಮನೆ ಮನೆ ತಿರುಗಿದರೋ? ಭಕ್ತರೂ, ವೇದಾಂತಿಗಳೂ ಆಗಿರುವ ಶ್ರೀ. ಐಯ್ಯಪ್ಪನವರೂ ಇನ್ನಿತರರೂ, ತಾವಾಗಲೀ ಏಜಂಟರುಗಳಿಂದಾಗಲೀ ಧನ ಧಾನ್ಯಗಳನ್ನು ಸಂಗ್ರಹಿಸಿ ಮುಜ್ರಾಯಿ ಇಲಾಖೆಯವರಿಗೆ ಕಳುಹಿಸಿಕೊಟ್ಟರೆ ಅವರು ತುಂಬಾ ಕೃತಜ್ಞರಾಗುವರು.

ಸರಕಾರದ ಕೆಲಸ ಶ್ರದ್ಧೆಯಿಂದ ನಡೆಸಿ ಟೈಟಲ್ ಅಥವಾ ಬೇರೆ ಪ್ರತಿಫಲ ದೊರಕಿಸಿಕೊಂಡ ಪ್ರೆಸಿಡೆಂಟರು ದೇವರ ಕಾರ್ಯವನ್ನೇಕೆ ಶ್ರದ್ಧೆವಹಿಸಿ ಮಾಡಿಲ್ಲವೆಂಬ ಠೀಕಿಸಿರುವರು. ಪ್ರೆಸಿಡೆಂಟರಿಗೆ ಅವರು ಮಾಡಿದ ಧರ್ಮಕಾರ್ಯದ ಫಲವಾಗಿ ಬಿರುದು ದೊರೆತದ್ದು. ದೇವರ ಸೇವೆ ಮಾಡಿದುದಕ್ಕೆ ಅವರು ಯಾವ ಬಿರುದನ್ನೂ, ಕವಿಷನನ್ನೂ ಹಾರೈಸಿಲ್ಲ. ಬಹಳ ವರ್ಷಗಳ ಹಿಂದೆಯೇ ಅವರು ದೇವರ ಮೇಲೆ ಭಕ್ತಿಯಿಂದ ದೇವರ ಸೇವೆ ಮಾಡುತ್ತಿರುವರೇ ವಿನಹ ವ್ಯಕ್ತಿಪ್ರೀತಿಗಾಗಲೀ ತನ್ನ ಭಂಡವಾಳವನ್ನು ಹೆಚ್ಚಿಸುವುದಕ್ಕಾಗಲೀ ದುಡಿದಿಲ್ಲ. ಇನ್ನು ಆಶಿಸುವುದೂ ಇಲ್ಲ.

ಈಗಿನ ಮುಜ್ರಾಯಿ ಇಲಾಖೆಯವರಿಗೆ ಶ್ರದ್ಧೆ ಭಕ್ತಿ, ಕವಿತ್ವವೆಂದೂ ಇಂಥಾ ಜವಾಬ್ದಾರಿಯ ಕೆಲಸವನ್ನು ಏತಕ್ಕೆ ವಹಿಸಿರುವರು? ಭಕ್ತಿ ಶ್ರದ್ಧೆಯಿರುವವರು ನಿರ್ವಹಿಸಲಿ ಎಂದಿರುವಿರಿ. ಕವಿಟ ಮೆಂಬರುಗಳ ಚುನಾವಣೆಯು ಸ್ವೇಚ್ಛಾವರ್ತಿಯಾದುದಲ್ಲ. ಯಾರು ಇಚ್ಛಿಸಿದರೂ ಬರಬಹುದಾಗಿತ್ತು. ಪತ್ರಿಕೆಗಳ ಮೂಲಕ ದಿನ ಮತ್ತು ಸ್ಥಳ ಗೊತ್ತುಮಾಡಿ ಪ್ರಕಟಿಸಿ, ಚುನಾಯಿತರಾದ ಮೆಂಬರುಗಳೇ ಕಮಿಟಿಯಲ್ಲಿರುವುದು. ಇಷ್ಟಪಟ್ಟಿದ್ದರೆ ಲೇಖಕರೇ ಬರಬಹುದಾಗಿತ್ತು. ಇದೆಲ್ಲಾ ತಿಳಿದು ಸಹ ಲೇಖಕರು ಈ ರೀತಿ ಪುಟಕುಂಬಿಸಲು ಬರೆದದ್ದು ವಿಷಾದಕರವೇ. ಹೀಗೆ ಕುಡಿಯುವ ನೀರಿಗೆ ಬೇಲಿಕಟ್ಟಿ, ತಾನೂ ಕುಡಿಯ ಪರರನ್ನೂ ಬಿಡ' ಎಂದಿರುವಿರಿ. ಬಹಿರಂಗ ಚುನಾವಣೆಗೆ ಯಾರು ಅಡ್ಡಿ ಬಂದರು! ದೇಶದವರಿಂದ ಚುನಾಯಿತರಾದ ಕಮಿಟಿ ಮೆಂಬರುಗಳೇ ಪ್ರೆಸಿಡೆಂಟರನ್ನು ಆರಿಸಿದರು. ಅವರೆಲ್ಲಾ ಹೊಸಬರಲ್ಲ. ೪-೧೦ ವರ್ಷಗಳಿಂದ ಪಾಳುಬಿದ್ದ ದೇವಾಲಯಗಳು ಎಷ್ಟು ಊರ್ಜಿತವಾಗಿವೆಯೆಂದು ನೆನಪಿಟ್ಟರು.

ಇಲಾಖೆಯ ಆಡಳಿತದಲ್ಲಿ ೭,೭೦೦ ಬಟ್ಟ ಭೂಮಿ ಗದ್ದೆಯಿಂದ ನೂರಕ್ಕೆ ೧೫ ಭಟ್ಟಯಂತೆ ಭತ್ತ ಸಿಕ್ಕಿದರೂ, ೭೫ ಗಾಡಿ ಭತ್ತ ಆಗುವುದೆಂದಿರುವಿರಿ. ಇಪ್ಪು ಪಾಲೂರು ಮತ್ತು ಪಾಡಿದೇವಸ್ಥಾನಗಳ ಗದ್ದೆಗಳಲ್ಲಿ ಬರುವ ಬತ್ತ ಆಯೂಯ ಸ್ಥಳಗಳಿಗಲ್ಲದೆ ಕಾವೇರಿ, ಭಾಗಮಂಡಲ ಓಂಕಾರೇಶ್ವರ, ಗದ್ದಿಗೆಗಳ ಉಪಯೋಗಕ್ಕೆ ಸಿಗದು. ಇದರಲ್ಲಿ ಕೆಲವು ಮೂಲಗೇಣಿಗಳು. ಕೆಲವು ಜೋಡಿ ಕಂದಾಯಗಳ ಗದ್ದೆಂ. ಸರಿಯಾಗಿ ಬೆಳೆ ಬೆಳೆದಃ ಬತ್ತ ಸಿಕ್ಕಿದರೆ ೨೪೦ ಬಟ್ಟ ಮಾತ್ರ ಸಿಗುತ್ತೆ. ಅದು ಮೇಲ್ಕಂಡ ದೇವಾಲಯಗಳಿಗೆ ಸಾಲದು. ಇದರ ಮೇಲೆ ಬೇಕಾದ ಬತ್ತವನ್ನು ಶುದ್ಧ ಕ್ರಯಕ್ಕೆ ತೆಗೆಯಬೇಕು ತರೀಜಮಿನಿಗೆ ಎಕ್ರೆಗೆ ಒಂದು ಸೇರು ಭತ್ತ ಮತ್ತು ಕಾಫಿ ತೋಟಕ್ಕೆ ಎಕ್ರೆಗೆ ಎರಡಾಣೆಯಂತೆ ವಸೂಲಿಮಾಡಿದರೆ ಕಮ್ಮಿಪಕ್ಷ ೧೦೦ ಗಾಡಿ ಭತ್ತವೂ ೭೦೦೦ ರೂ. ಗಳ ವಸೂಲಾಗುತ್ತೆಂದು ಗಾಳಿಗೋಪುರ ಕಟ್ಟುವಂತೆ ಸ್ವಪ್ನಾವಸ್ಥೆಯ ಬತ್ತಿಯನ್ನು ವಿದ್ಯಾವಂತರಾದ ನೀವು ಬರೆದಿರುವುದು ಆಶ್ಚರ್ಯವೇ!

ಇಲಾಖೆಯ ಮೆಂಬರುಗಳ ಭಕ್ತಿ ಕಡಿಮೆಯಾದುದರಿಂದ ದೇಶಕ್ಕೆ ಮಳೆ ಇಲ್ಲವೆನ್ನುವಿರಿ. ದೇವರು, ನಿಮ್ಮ ನ್ಯಾಯರೀತಿಯ ಪ್ರಕಾರ ಅವರನ್ನು ಮಾತ್ರ ಏಕೆ ಶಿಕ್ಷಿಸದೆ, ಇಡೀ ದೇಶವೇ ಹಾಹಾಕಾರ ಮಾಡುವಂತೆ ಮಾಡಿರುವರು? ಎಲ್ಲರೂ ಸೂಚಿಸುವ ಮೊದಲೇ ಇಲಾಖೆಯ ಕೋರಿಕೆಯಂತೆ ಮಳೆ ಬೆಳೆ ಸರಿಯಾಗಿ ಬರುವಂತೆ ಪೂಜೆ ನಡಿಸುತ್ತಿರುವರು. ಮಳೆ ಬರುತ್ತಲೂ ಇದೆ.

ಶ್ರೀಯುತರ ೧೫-೭-೫೧ರ ಲೇಖನವನ್ನು ಓದಿ ಮಡಿಕೇರಿ ಓಂಕಾರೇಶ್ವರ ದೇವಸ್ಥಾನದ ಪೂಜಾರಿಗಳು ಸಂಬಳ ಹೆಚ್ಚಿಸಬೇಕೆಂದು ಮನುಷ್ಯರ ಹಿಡಿದರು. ಧಾನ್ಯಗಳ ಬೆಲೆಯು ೧೯೪೬ರಲ್ಲಿ ಇದ್ದಂತೆ ಏರಿದ್ದರಿಂದ ಅವರ ಸಂಬಳ ೪ ರಷ್ಟು ಹೆಚ್ಚಿಸಿ ಸಹ ತಮ್ಮ ಲೇಖನವನ್ನು ಓದಿ ದಿನ ಒಂದಕ್ಕೆ ಊಟವಲ್ಲದೆ ೧ ರೂಪಾಯಿ ಸಂಬಳ ಬೇಕೆಂದು ಹಠ ಹಿಡಿದು ಫಲಕಾರಿಯಾಗದೆ, ತಿಪ್ಪನೆ ಪುನಃ ಕೆಲಸಕ್ಕೆ ಬಂದರು. ಅದು ದರಿಂದ ಸುಮ್ಮನೆ ದೇವಸ್ಥಾನದ ಆಗು ಹೋಗುಗಳನ್ನರಿಯದೆ, ಬರೆಯುವುದರ ಬದಲು ನೀವು ತಿಳಿಸಿದಂತೆ ನಿಮ್ಮ ಉದಾರ ಸಹಾಯವನ್ನು ಧನಧಾನ್ಯದ ಮೂಲಕ ದೇವರ ಸೇವೆಗೆ ಕೊಟ್ಟು, ನೀವು ಸೇಲ್ವಂಗ್ತಿಯಾಗಿ ಬೇರೆಯವರಿಂದಲೂ ಸಹಾಯಬರುವಂತೆ ಮಾಡಿದ್ದರೆ ನಿನುಗೆ ಚಿರಋಣಿಯಾಗುತ್ತಿದ್ದೆವು. ಭಕ್ತಿಗೂ, ಶ್ರದ್ಧೆಗೂ ಆಳವಿದೆಯೇ? ಯಾರೂ ಯಾಚಿಸದೇ ಕೊಡಬಹುದು. ದಿವಂಗತ ಶ್ರೀ. ಕೊರವಂಡ ಮುತ್ತಣ್ಣನವರು, ಇನ್ನೂ ಅನೇಕರೂ ಬೇಕಾದಷ್ಟು ಹಣ ದೇವರ ಸೇವೆಗೆ ಹಾಕಿ ಅವರವರ ಹೆಸರನ್ನು ಅಚ್ಚಳಿಯದೆ ಮಾಡಿರುವರು. ಈಗಿನವರು ಸಹ ಕೊಡಲು ಮುಂಬಂದಿರುವರ.

ಮುಜ್ರಾಯಿ ಇಲಾಖೆಯವರು, ದೇಶಸ್ಥರ ಸಹಾಯವನ್ನು ಬರೀ ಪತ್ರಿಕೆಗಳಲ್ಲಿ ಕೋರಿದುದಲ್ಲದೆ ಪ್ರತಿ ಊರಿನ ಸಂಘಗಳಿಗೆ ಯೂನಿಯನ್ ಪ್ರೆಸಿಡೆಂಟರ ಮೂಲಕ ಹೆಸ್ತ ಪ್ರತಿಗಳನ್ನು ಹಂಚಿರುವರು. ಧನಧಾನ್ಯ ದೊರೆತಲ್ಲಿ ಪ್ರಿಂಟೆಡ್ ರಶೀತಿ ಕೊಡುವರು. ಈ ಮೊದಲಿಂದಲೇ ಧರ್ಮನಿಧಿ ಸಂಗ್ರಹಕ್ಕಾಗಿ ಏಜಂಟರುಗಳನ್ನು ನೇಮಿಸಿ ಅವರ ಬಳಿ ಪ್ರಿಂಟೆಡ್ ರಶೀತಿ ಬುಕ್ಕುಗಳನ್ನು ಕೊಡಲಾಗಿದೆ. ಭಕ್ತ ಶಿರೋಮಣಿಗಳು ತಮ್ಮ ಸಹಾಯವನ್ನು ಸಲ್ಲಿಸಿ ಶ್ರೀಕಾವೇರಿ ಮಾತೆಯ ಆಶೀರ್ವಾದಕ್ಕೆ ಅರ್ಹರಾಗಬೇಕೆಂದು ವಿನಂತಿ.

ಪ್ರಕಟಣೆ.

ಶ್ರೀಮಾನ್ ಅಪ್ಪನೆರವಂಡ ಮಾದಪ್ಪನವರು ಪಾರಾಣೆಯಲ್ಲಿ ಕಟ್ಟಿಸಿದ ಶಾಲಾ ಕಟ್ಟಡದ ವೇಲ್ಮನೆಯ ರಿಪೇರಿ ಮಾಡುವ ಕೆಲಸಕ್ಕೆ ಕಂಟ್ರಾಕ್ಟುದಾರರು ಬೇಕಾಗಿದ್ದಾರೆ. ಖಾಯಿಸ್ದಾರರು ಕೆಲಸದ ವಿವರವನ್ನು ಶಾಲಾ ಹೆಡ್‌ಮಾಸ್ಟರಿಂದ ಖುದ್ದು ಬಂದು ತಾ. 15-10-51ರ ಒಳಗೆ ತಿಳಿದುಕೊಳ್ಳತಕ್ಕದ್ದು

ಪಾರಾಣೆ ಶಾಲಾ
3-1 ಪಂಚಾಯಿತದಾರರು.
ತಾ. 18-9-51.

ನೋಟೀಸ್.

ಈ ಮೂಲಕ ಸರ್ವರಿಗೂ ತಿಳಿಯಪಡಿಸುವುದೇನೆಂದರೆ—

ತಾ. 30-8-51ರ 'ಕೊಡಗ' ಪತ್ರಿಕೆಯಲ್ಲಿ ಶ್ರೀ ಸಿ. ಎ. ಪೊನ್ನಪ್ಪನವರು ಕೆಲವು ಆಸ್ತಿಗಳು ಮೂರಾಟಕ್ಕಿದೆಯೆಂದು ಪ್ರಕಟಿಸಿದ್ದು ಸರಿಯಷ್ಟೆ. ಆದರೆ ಸದರಿ ಆಸ್ತಿಗಳು ನಮಗೆ ಕೂಟುಂಬ ಆಸ್ತಿಯೂ ಗಿರುವುದರಿಂದ ಅವುಗಳನ್ನು ಮೂರಾಟ ಮಾಡಲು ಅವರಿಗೆ ಯಾವ ಹಕ್ಕೂ ಇರುವುದಿಲ್ಲವೆಂದೂ, ಸದರಿ ಆಸ್ತಿಗಳನ್ನು ನಮ್ಮ ಒಪ್ಪಿಗೆ ಇಲ್ಲದೆ ಪಡಕೊಂಡವರು ಆದರಿಂದ ಉಂಟಾಗುವ ಸರ್ವ ನಷ್ಟ ಕಷ್ಟಕ್ಕೂ ಅವರೇ ಜವಾಬ್ದಾರರಾಗಬೇಕಾಗುವುದೆಂದೂ ಈ ಮೂಲಕ ತಿಳಿಸಲಾಗಿದೆ.

ಕಲ್ತೋಡು, ಕೂಟುಂಬಸ್ಥರ ಪರ,
ಚೆಪ್ಪುಡಿರ ಬಿ. ಕಾರ್ಯಪ್ಪ.
18-9-51 ಮೂಯವಂಡಿ ಗ್ರಾಮ.
2-1

ಪ್ರಕಟಣಾ ಪತ್ರಿಕೆ.

ಉತ್ತರಕೊಡಗು ತಾಲೋಕು ಸೋಮವಾರಪೇಟೆನಾಡು ಬಿಳಿಗೇರಿ ಗ್ರಾಮದ ಬಾಚಿನಾಡಂಡ ಕುಶಾಲಪ್ಪ, ಮುತ್ತಣ್ಣ ಬಸಪ್ಪ, ಮೂಚಯ್ಯ, ಬಿ. ಎಂ. ಪೂವಯ್ಯ ಬಿ. ಕೆ. ಕುಟ್ಟಪ್ಪ, ಮುತ್ತಪ್ಪ, ಮಾದಪ್ಪ ಸಹ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ—ನಮ್ಮ ಬಾಚಿನಾಡಂಡ ಕಾಳಪ್ಪನ ಮಗ ಪೂವಯ್ಯನು ಪುತ್ರ ಸಂತಾನವಿಲ್ಲದ್ದರಿಂದ ತನ್ನ ಹೆಸರಿನಲ್ಲು ಜಮೂಬಂದಿ ನಡೆಯು ಬರುವ ಸ್ಥಿರ ಆಸ್ತಿಗಳನ್ನು ಶುದ್ಧ ಕ್ರಯಕ್ಕೆ ಮೂರಾಟ ಮಾಡುವುದಾಗಿ ತಿಳಿಯಿತ್ತೇವೆ. ಸದರಿ ಪೂವಯ್ಯನವರ ಹೆಸರಿನಲ್ಲಿರುವ ಪೂರ್ತಿ ಸ್ಥಿರ ಆಸ್ತಿಗಳು ನಮ್ಮ ಕೂಟುಂಬದ ಪಿತ್ರಾರ್ಜಿತ ಆಸ್ತಿಯೂ ಗಿರುತ್ತದೆ. ಸದರಿಯವರ ಹೆಸರಿನಲ್ಲಿರುವ ಪೂರ್ತಿ ಸ್ಥಿರ ಚರಾಸ್ತಿಗೆ ಸಹ ನಾವು ಕೂಟುಂಬಸ್ಥರೆಲ್ಲ ಹಕ್ಕುದಾರರಾಗಿರುತ್ತೇವೆ. ಆದುದರಿಂದ ಯಾರಾದರೂ ಸದರಿಯವರ ಹೆಸರಿನಲ್ಲಿರುವ ಸ್ಥಿರ ಸ್ವತ್ತುಗಳನ್ನು ಶುದ್ಧ ಕ್ರಯ, ಬೋಗ್ಯ, ವಗೈರೆಗೆ ತೆಗೆದುಕೊಳ್ಳಕೂಡದು. ಹಾಗೇನಾದರೂ ನಮ್ಮ ಕೂಟುಂಬದವರ ಒಪ್ಪಿಗೆ ಇಲ್ಲದೆ ಕ್ರಯಕ್ಕೆ ತೆಗೆದುಕೊಂಡರೆ ಆಗ್ಗೆ ನವೀದ್ದಾಗುವ ಸರ್ವ ನಷ್ಟಕಷ್ಟಕ್ಕೂ ಸಹ ಕ್ರಯಕ್ಕೆ ತೆಗೆದುಕೊಂಡವರು ಬಾಧ್ಯರಾಗತಕ್ಕದ್ದು ಎಂಬದಾಗಿ ಈ ಮೂಲಕ ತಿಳಿಯಪಡಿಸಿರುತ್ತೇವೆ.

ಬಿಳಿಗೇರಿ, ಕೂಟುಂಬಸ್ಥರ ಪರ,
18-9-51. ಬಿ. ಕುಶಾಲಪ್ಪ.

ದಿ ಬಾಂಬೆ ಮ್ಯೂಚುಯಲ್ ಲೈಫ್ ಅಷ್ಯೂರೆನ್ಸ್ ಸೊಸೈಟಿ ಲಿಮಿಟೆಡ್.

12-11 [ಸ್ಥಾಪಿತ 1871]

ಭಾರತದಲ್ಲಿನ ಅತ್ಯಂತ ಹಳೆಯ ವಿಮಾ ಸಂಸ್ಥೆ.

ಉತ್ಸಾಹಶಾಲಿ ಯುವಕರಿಗೆ ಸಂಬಳ ಯೂ ಕಮಿಶನ್ ಮೇಲೆ ಪ್ರತಿನಿಧಿಗಳಾಗಲು ಅವಕಾಶವಿದೆ.

ವಿವರಗಳಿಗೆ:—ದಿ ಬ್ರಾಂಚ್ ಸೆಕ್ರೆಟರಿ,
172-173, ನರಸಿಂಹರಾಜರೋಡು, ಬೆಂಗಳೂರು 2.

ಕೊಡಗಿನಲ್ಲಿ ಕೈಗಾರಿಕೆಗಳ ಸಾಧ್ಯತೆ

ಲೇ:—ಶ್ರೀ .ಕೆ. ಬಿ. ಐಯ್ಯಪ್ಪ, ಬಿ. ಎ., ಬಿ ಟಿ., ನಾಪೋಕ್ಲು.

ಒಂದು ದೇಶದ ಸರ್ವತೋಮುಖವಾದ ಅಭಿವೃದ್ಧಿಯಾಗಬೇಕಾದರೆ, ಆ ದೇಶದ ಕೃಷಿ ಮತ್ತು ಕೈಗಾರಿಕೆಗಳು ಅತ್ಯುನ್ನತ ಸ್ಥಿತಿಗೆ ಏರಬೇಕು. ಯಂತ್ರಿಕ ಕೈಗಾರಿಕೆಗಳಿಗಿಂತ ಗುಡಿಕೈಗಾರಿಕೆಗಳು ಪ್ರಗತಿ ಹೊಂದಿದರೆ ಸಾಮಾನ್ಯ ಪ್ರಜಾವೃಂದಕ್ಕೆ ಕ್ಷೇಮವಾಗುವುದು. ತಮ್ಮ ಅವಶ್ಯಕತೆಗಳನ್ನು ತಾವೇ ಪೂರೈಸುವವರಾಗುವದರಿಂದ ದ್ವಿಮುಖ ಪ್ರಯೋಜನವಿದೆ. ತನುಗೆ ದೇಶಾದ ಸಾಮಾನುಗಳನ್ನು ಕೊಂಡುಕೊಳ್ಳಬೇಕಾಗಿಲ್ಲ, ಮಾತ್ರವಲ್ಲ ಉಳಿಕೆಯನ್ನು ಮಾರಿ ಬಂದ ಹಣದಲ್ಲಿ ಇತರ ಸಾಮಾನುಗಳನ್ನು ಪಡೆದು ಕೊಳ್ಳಬಹುದು. ಆದರೆ ಈ ಔದ್ಯೋಗಿಕ ಪೈಪೋಟಿ ನಡೆಯುವ ಆಧುನಿಕ ವಿಜ್ಞಾನಾರಾತ್ಯ ಪ್ರಪಂಚದಲ್ಲಿ ಗುಡಿ ಕೈಗಾರಿಕೆಯೊಂದೇ ಇದ್ದರೆ ಸಾಲದು. ಯಂತ್ರದ ಮುಖೇನ ಸಹ ತಯಾರಾಗಬೇಕು. ಇಲ್ಲದಿದ್ದರೆ ಅಂತಹ ದೇಶ ಕೇವಲ ಹಿಂದುಳಿಯಬೇಕಾಗುವುದು.

ಸ್ವತಂತ್ರ ಭರತ ಖಂಡದಲ್ಲಿ ಈಗೀಗ ಹಲವು ಕಾರ್ಖಾನೆ ಕೇಂದ್ರಗಳು ನಿರ್ಮಾಣವಾಗಿವೆ. ಹಲವು ಪ್ರಾಂತ್ಯಗಳಲ್ಲಿ ಸೂಲುವುದೇ ಮೊದಲಾದ ಗುಡಿ ಕೈಗಾರಿಕೆಗಳು ಅಭಿವೃದ್ಧಿಯಾಗುತ್ತಿವೆ. ಇದು ಸಾಲದು. ಪ್ರತಿ ಭಾಗದಲ್ಲಿ ಯಾವ್ಯಾವ ಕೈಗಾರಿಕೆ ಸ್ಥಾಪನೆಗೆ ಸಾಧ್ಯವಿದೆಯೋ, ಅವುಗಳನ್ನು ಪರಿಶೀಲಿಸಿ, ಪುರಜನರೂ ಸರ್ಕಾರದವರೂ ಒನ್ಮನಸಿನಿಂದ ಕಾರ್ಯ ಪ್ರವೃತ್ತರಾಗಬೇಕು. ಈ ದ್ವಿಪಕ್ಷದವರು ಪರಸ್ಪರ ಒಗ್ಗಟ್ಟು, ಸಹಾಯ ಸೌಹಾರ್ದತೆಯಿಂದ ವೃತ್ತಿ ಪ್ರಾರಂಭಿಸಿದ್ದೇ ಆದಲ್ಲಿ, ಆ ಉದ್ಯಮವು ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ. ಸರ್ಕಾರದ ಮೇಲೆ ಪೂರ್ಣ ಹೊಣೆಗಾರಿಕೆಯನ್ನು ಹಾಕಿ, ಪ್ರಜೆಗಳು ತಪ್ಪೊನ್ಮತವನ್ನನುಸರಿಸಿದರೆ ದೇಶದ ಉನ್ನತಿಯಾಗದು. ಔದ್ಯೋಗಿಕ ಪ್ರಪಂಚದಲ್ಲಿ ಸಹಕಾರ, ನಮ್ಮ ಸಹಕಾರವೆಂಬ ಮಮತೆ, ಪ್ರೀತಿಭಾವ ಸರ್ವರಲ್ಲಿ ಮೂಡಿದರೆ ಸರಕಾರಕ್ಕೆ ಮಹತ್ತಾದ ಸಹಾಯ ಧೀಡಿದಂತಾಗುತ್ತದೆ.

ಪ್ರಕೃತಿ ಸೌಂದರ್ಯದ ತವರ್ಮನೆಯಾಗಿ, ಅರಣ್ಯ ಸಂಪತ್ತಿನ ಹೃದಯವಾಗಿರುವ ನಮ್ಮ ಈ ಸುಂದರ ಕೊಡಗು ದೇಶದಲ್ಲಿ ಅನೇಕಾನೇಕ ಕೈಗಾರಿಕೆ ಉಪಯೋಗಗಳನ್ನು ಪುಟ್ಟ ರೀತಿಯಲ್ಲಿ ಸ್ಥಾಪಿಸಿ, ಮೂದರಿ ದೇಶವನ್ನಾಗಿ ಮಾಡಲು ತುಂಬಾ ಅನುಕೂಲವಿದೆ. ಅತೀವೃಷ್ಟಿಯಾಗುವ ಇಲ್ಲಿ ಸಾಕಷ್ಟು ಕಚ್ಚಾ ವಸ್ತು ಬೆಳೆಯುತ್ತದೆ. ದುಡಿಮೆಗಾರರಿಗೆ ಸಾಕಷ್ಟು ಆಹಾರ ದೊರೆಯುತ್ತದೆ. ಆದರೆ ಆಡಳಿತಗಾರರಲ್ಲಿ ಪ್ರಜೆಗಳಲ್ಲಿ ಮಂತ್ರ, ಧನಪಂಚರಲ್ಲಿ ಈ ತ್ರಿಪಕ್ಷಗಳಲ್ಲಿ ಬಲಿಷ್ಠವಾಪ ಒಗ್ಗಟ್ಟು ಇದ್ದರೆ, ಯಾವ ರೀತಿಯ ಕೈಗಾರಿಕಾ ಉದ್ಯಮವನ್ನಾದರೂ ಸ್ಥಾಪಿಸಬಹುದು. ಪ್ರಾರಂಭದ ಉತ್ಸಾಹವು ಅಂತ್ಯದ ವರೆಗೆ ಏಕ ರೀತಿಯಾಗಿದ್ದರೆ ಮಾತ್ರ ಸಾಕು.

ಮರಮುಟ್ಟುಗಳ ಕೈಗಾರಿಕೆ

ವನ ಸಂಪತ್ತಿಗೆ ಹೆಸರುವಾಸಿಯಾಗಿರುವ ಇಲ್ಲಿ ಇಚ್ಛಿಸಿದಾಗ ಮರ ಸಿಗುವುದಿಲ್ಲ ಹೆಂದರೆ ಅತೀ ಸೋಜಿಗ ವಿಷಯವೇ ಸರಿ. ಇತ್ತಲಾಗಿ ಮರವ್ಯಾಪಾರವೊಂದು ಪ್ರಾರಂಭವಾಗಿ, ವನಗಳೆಲ್ಲಾ ನಾಶವಾಗುತ್ತಿವೆ. ಮರ ಕುಯ್ಯುವ ಎರಡು ಯಾ ಮೂರು ಗಿರಣಿಗಳು ಇತ್ತೀಚೆಗೆ ಸ್ಥಾಪನೆಯಾದದ್ದು ಸಂತೋಷದ ವಿಷಯವೇ ಸರಿ. ಮರಮುಟ್ಟುಗಳನ್ನು ತಯಾರಿಸುವ ಒಂದು ದೊಡ್ಡ ವೃತ್ತಿ ಕಾರ್ಖಾನೆ ನಮ್ಮ ದೇಶದಲ್ಲಿರದಿರುವುದು ಬಹಳ ಶೋಚನೀಯ ವಿಷಯ. ಮರ ಸಾಮಾನುಗಳು ಬೇಕಾದರೆ ಪರ ದೇಶದಿಂದ ತರಬೇಕಾಗುವುದು. ಬಡಗಿ ವೃತ್ತಿಯನ್ನು ಕಲಿತು ಸಾಕಷ್ಟು ದೊಡ್ಡ ಮರ ಸಾಮಾನುಗಳ ಅಂಗಡಿಯನ್ನು ತೆರೆಯಲು ತುಂಬಾ ಅನುಕೂಲ ಮತ್ತು ಅವಕಾಶ ಇದೆ. ಮಾತ್ರವಲ್ಲ ಮೂಲೀಕರಿಗೂ, ಜನರಿಗೂ ತುಂಬಾ ಪ್ರಯೋಜನಕಾರಿಯಾಗಿದೆ. ಈಗೀಗ ಒಬ್ಬಿಬ್ಬರು ಮಡಿಕೇರಿಯಲ್ಲಿ ಈ ವೃತ್ತಿಯನ್ನು ಪ್ರಾರಂಭಿಸಿದ್ದಾರೆ. ಅವರ ಪ್ರಾರಂಭದ ಉತ್ಸಾಹವು, ಅಂತ್ಯದ ವರೆಗೂ ಇದ್ದು, ತಮ್ಮ ವೃತ್ತಿಯಲ್ಲಿ ಸಂಪೂರ್ಣ ನೈಪುಣ್ಯತೆಯನ್ನೂ, ಕಲಾ ಕೌಶಲ್ಯತೆಯನ್ನೂ ಪಡೆದು, ಜಲೋದಾದ ಹಾಗೂ ಬಲವಂತ ಸಾಮಾನುಗಳನ್ನು ರಚಿಸುವವರಾಗಬೇಕು. ಖರೀ ಹಣದ ಲಾಲಸೆಯಿಂದ ದುಡಿದರೆ ಪ್ರತಿಫಲ ಹುತ್ತು ಸಾರ್ವಜನಿಕ ಬೆಂಬಲ ಕಡಿಮೆಯಾಗದಿರದು.

ಬೆತ್ತ

ಧಾರಾಳವಾಗಿ ಇವರ ಕಚ್ಚಾ ಪೂಲು ಇಲ್ಲಿ ದೊರೆಯುವುದರಿಂದ, ಇದರ ಸಾಧ್ಯತೆ ತುಂಬಾ ಇದೆ. ನಾಜೂಕಾದ ಹಾಗೂ ತಕ್ಕ ಪ್ರತಿಫಲ ಲಭಿಸುವ ದುಡಿಮೆಯಾಗಿದೆ. ಹಲವು ವರ್ಷಗಳ ಹಿಂದೆ ನಮ್ಮ ಹಲವು ಶಾಲೆಗಳಲ್ಲಿ ವಿದ್ಯಾರ್ಥಿಗಳು ಖಡ್ಡಾಯವಾಗಿ ಈ ಕೈಗಾರಿಕೆಯನ್ನು ಅಭ್ಯಾಸ ಮಾಡುತಿದ್ದರು. ಕುರ್ಚಿ, ಮೇಜು, ಪೆಟ್ಟಿಗೆ, ತೊಟ್ಟಿಲು, ಬುಟ್ಟಿ ಮತ್ತು ತಟ್ಟೆ ಇವೇ ಮೊದಲಾದ ಸಾಮಾನುಗಳನ್ನು ತಯಾರಿಸಿ ಮೂರಿ ಹಣ ಗಳಿಸುತಿದ್ದರು ಈಗ ಯಾವ ಶಾಲೆಯಲ್ಲಿಯೂ ಕಂಡು ಬರುವುದಿಲ್ಲ. ಇಹಸ್ಮನ್ ಸರಿಯಾಗಿ ಕಲಿತ ಯಾವ ವಿದ್ಯಾರ್ಥಿಯೂ ಶಾಲೆ ಬಿಟ್ಟನಂತರ ಇದನ್ನು ತನ್ನ ಪ್ರಧಾನ ಜೀವನ ವೃತ್ತಿಯಾಗಿ ಮುಂದುವರಿಸಲಿಲ್ಲ. ಪುನಃ ಇದನ್ನು ಶಾಲೆಯಲ್ಲಿ ಜಾರಿಗೆ ತರುವುದು ಬಹಳ ಒಳ್ಳೆಯದು. ಈಗಿನ ಕಚ್ಚಾ ಮತ್ತು ಕೈಗಾರಿಕೆ ಪಾಠದಲ್ಲಿ ಸೇರಿಸಲು ಸಾಕಷ್ಟು ಅವಕಾಶವಿದೆ. ಮಾತ್ರವಲ್ಲ ಪಾಸಗೀ ಮಹನೀಯರು ಈ ವೃತ್ತಿ ಕೇಂದ್ರಗಳನ್ನು ಸ್ಥಾಪಿಸಬೇಕು. ನಮ್ಮ ದೇಶದ ಕೆಲವು ಭಾಗಗಳಲ್ಲಿ ಅಂದರೆ ಮರೆನಾಡಿನಲ್ಲಿ ಕುರುಬರು ಅತ್ಯುತ್ತಮ ಬೆತ್ತದ ಸಾಮಾನುಗಳನ್ನು ತಯಾರಿಸುತ್ತಾರೆ. ಆದರೆ ಇವರು ಬಹಳ ಪೈಸಗಳ್ಳರು. ಒಂದು ವಾರದಲ್ಲಿ ತಯಾರು ಮಾಡಬಹುದಾದ ಒಂದು ವಸ್ತುವನ್ನು ಒಂದು ವರ್ಷದಲ್ಲಿ ಪೂರೈಸುವುದಿಲ್ಲ. ಈ ಕೆಲಸಗಾರರನ್ನು ಹಿಡಿದು, ಅವರ ಕಲಾ ಕೌಶಲ್ಯದ ಮಹತ್ತರವಾದ ಪ್ರಯೋಜನ ಜನರಿಗೆ ಸಿಗುವಂತೆ, ಈ ಉದ್ಯಮದಲ್ಲಿ ಅಭಿರುಚಿ ಇರುವವರು ಮಾಡಿದರೆ ಸರ್ವರಿಗೂ ಪ್ರಯೋಜನವಾಗಬಹುದು.

ಕಾಗದ ತಯಾರಿಕೆ

ಈ ಉದ್ಯಮದ ಸಾಧ್ಯತೆ ಹಣದ ದೃಷ್ಟಿಯಿಂದ ಸುಲಭಪಲ್ಲದಿದ್ದರೂ, ಸರ ಕಾರದವರು ಮತ್ತು ಧನವಂತರು ಆಸಕ್ತಿ ಪಟ್ಟರೆ ಅತಿ ಸುಲಭವಾಗಿದೆ. ಬೇಕಾದಷ್ಟು ಬಿದಿರು ಮತ್ತು ಕೆಲವು ವಿಧದ ಬೆಂಡಿನ ಮರಗಳು ಇಲ್ಲಿ ಬೆಳೆಯುವುದರಿಂದ ಮಿತಿಯುಳ್ಳ ತಯಾರಿಕೆಗೆ ಅವಕಾಶವಿದೆ. ಕಾಗದದ ಬೆಲೆ ಏರುತ್ತಾ, ಅದರ ಅಭಾವವು ದಿನೇ ದಿನೇ ಅಧಿಕವಾಗುತ್ತಿದೆ. ಫ್ರೇಜರ್ ಪೇಟೆಯಲ್ಲಿ ಕಾರ್ಖಾನೆಯೊಂದು ಸ್ಥಾಪನೆಯಾದದ್ದು ತುಂಬಾ ಸಂತೋಷಕರ; ಆದರೆ ಆಸಿಯ ಉತ್ಸಾಹ ಮತ್ತು ಕುತೂಹಲ ಈಗ ಗಾಳಿಯಲ್ಲಿ ತೂರಿ ಹೋಗುತ್ತಿರುವುದು ತುಂಬಾ ವಿಷಾದಕರ. ಧನ ಸಂಪಾದನೆ ಮಾತ್ರ ಮುಖ್ಯ ಧ್ಯೇಯವಾಗಿರಕೂಡದು. ದೇಶದ ಆರ್ಥಿಕ ಕಲ್ಯಾಣವನ್ನು ಪ್ರಜೆಗಳ ಸುಖ ಸೌಕರ್ಯಗಳನ್ನು ಬಯಸತಕ್ಕದ್ದು. ನಮ್ಮ ಇಡೀ ಭರತ ಖಂಡಡ ಬಹು ಸಂಖ್ಯಾತ ಖಾಸಗೀ ಉದ್ಯಮಗಳ ಅವಸ್ಥೆಯೆಲ್ಲಾ ಹೀಗೆಯೆ! ಆದ್ದರಿಂದಲೇ ರಾಷ್ಟ್ರೀಕರಣದ ನುಡಿ ಅಲ್ಲಲ್ಲಿ ಕೇಳಿ ಬರುತ್ತಿರುವುದು. ಆದ್ದರಿಂದ ಕನಿಷ್ಠ ಹಾಗೂ ವಿತಿಯುಳ್ಳ ರೀತಿಯಲ್ಲಿ ಈ ಉದ್ಯಮವನ್ನು ಆಭಿವೃದ್ಧಿಪಡಿಸಲು ಉತ್ಸಾಹಿಗಳು ತಲೆಯೆತ್ತಿದರೆ ಅತೀ ಪ್ರಯೋಜನಕರವಾಗಿದೆ.

ಮಡಿಕೆ ತಯಾರಿಕೆ

ನಮ್ಮ ಜನರಿಗೆ ಬೇಕಾದಷ್ಟು ಮಣ್ಣಿನ ಪಾತ್ರೆಗಳು ಇಲ್ಲಿನ ಜನರಿಂದಲೇ ತಯಾರಾಗುತ್ತಿದೆ ಎಂದರೆ ತಪ್ಪಾಗಲಾರದು. ಗುಡಿ ಕೈಗಾರಿಕೆಯೋಪಾದಿಯಲ್ಲಿ ಇದೂ ಸಾಗುತ್ತಿದೆ. ಆದರೆ ಒಂದು ನಿಯಮ ಇದರಲ್ಲಿ ತೋರುವುದಿಲ್ಲ. ಇದನ್ನು ಸುಧಾರಿಸಿ ವ್ಯವಸ್ಥಿತಗೊಳಿಸಬೇಕು. ಹಳ್ಳಿಗಳಲ್ಲಿ ಎಲ್ಲಾ ಸಮಯದಲ್ಲಿ ಪಾತ್ರೆಗಳು ದೊರೆಯುವುದಿಲ್ಲ. ಸಣ್ಣದಾದ ಒಂದು ಹೆಂಜು ಕಾರ್ಖಾನೆಯನ್ನು ಸ್ಥಾಪಿಸಬಹುದು. ಸ್ಥಾಪಿಸಿದರೆ ಮೂಲಿಕರಿಗೆ ನಷ್ಟವಾಗಲಿಕ್ಕಿಲ್ಲ ಜನರ ಬೇಡಿಕೆಯನ್ನು ಪೂರೈಸಿದಂತಾಗುವುದು.

ಸಾಬೂನು

ಸೀಗೆಕಾಯಿಗೆ ಬೆಲೆ ಏರುತ್ತಿದೆ. ಈ ವ್ಯಾಪಾರವು ಭರದಿಂದ ನಮ್ಮ ದೇಶದಲ್ಲಿ ನಡೆಯುತ್ತಿದೆ. ಇಲ್ಲಿ ಕಾಡುಗಳಲ್ಲಿ ಬಟ್ಟೆ ಮಡಿ ಮೂಡುವ ಕೆಲವು ಕಾಯಿಗಳು ಬೆಳೆಯುತ್ತವೆ. ಈ ಕಚ್ಚಾ ವಸ್ತುಗಳನ್ನೆಲ್ಲಾ ಇಲ್ಲಿಯೇ ಶೇಕರಿಸಿ, ಸಿದ್ಧ ವಸ್ತುಗಳನ್ನು ತಯಾರು ಮಾಡುವ ವ್ಯವಸ್ಥೆ ಮಾಡಬಹುದಾಗಿದೆ. ಇದರಿಂದ ಖಂಡಿತವಾಗಿಯೂ, ತಂಬಾ ಪ್ರಯೋಜನವಿದೆ ಈ ದೀತೇ ವಿನಾ ನಷ್ಟವುಂಟಾಗಲಿಕ್ಕಿಲ್ಲ ನಮ್ಮ ದೇಶೀಯರ ಉಪಯೋಗಕ್ಕೆ ಬೇಕಾದಷ್ಟು ಮತ್ತು ನೆರೆ ರಾಷ್ಟ್ರಗಳಿಗೆ ರವಾನಿಸುವಷ್ಟು ಸಾಬೂನನ್ನು ತಯಾರು ಮಾಡಬಹುದು.

ಎಣ್ಣೆ ಕಾಳುಗಳ ಸಂಗ್ರಹ

ನಮ್ಮ ಅರಣ್ಯಗಳಲ್ಲಿ ಅನೇಕಾನೇಕ ಎಣ್ಣೆ ಕಾಳುಗಳು ದೊರೆಯುತ್ತವೆ. ಕೆಲವು ರೀತಿಯ ಎಣ್ಣೆಕಾಳುಗಳನ್ನು ಜನರು ಬೆಳೆಸುತ್ತಾರೆ. ಹಿಂದಿನ ಕಾಲದ ನಮ್ಮ ಜನರು ಈ ಎಣ್ಣೆ ಕಾಳುಗಳನ್ನು ಶೇಕರಿಸಿ ಎಣ್ಣೆ ತೆಗೆದು ದೀಪಗಳನ್ನು ಉರಿಸುತ್ತಿದ್ದರು. ಆಪರ ಬಂಡಿನಿಂದ ದೀಪದ ಬತ್ತಿಗಳನ್ನು ತಯಾರಿಸುತಿದ್ದರು. ನವ ನಾಗರೀಕತೆಯ ಪ್ರಭಾವವು ಈ ವೃತ್ತಿಯನ್ನು ನೂಯ ನೂಡಿದೆ. ಇದು ಹಳೇ ಕಾಲದ ಗುಡಿ ಕೈಗಾರಿಕೆ ಎನ್ನಬಹುದು. ಈಗ ಇದರ ಕಡೆಗೆ ಯಾರಾದರೂ ಗಮನವಿತ್ತರೆ ಅನಾಗರಿಕನೆಂದೂ ಅತೀ ಗರೀಬನೆಂದೂ ತುಚ್ಛೀಕಾರ ಮಾಡುವುದಿದೆ. ಇಹು ಶುದ್ಧ ಮೂಟ್ಠಾಳತನ! ಇದರ ಲಾಭವನ್ನು ಪ್ರತಿಯೊಬ್ಬರೂ ಸಾಧ್ಯವಾದಷ್ಟು ಪಡೆಯಲು ಯತ್ನಿಸಬೇಕು. ಇದಕ್ಕೆ ಸರಕಾರದ ಸಹಾಯವಾಗಲೀ ಅಧಿಕವಾದ ದ್ರವ್ಯವಾಗಲೀ ಬೇಕಾಗಿಲ್ಲ.

ಜೇನು ಸಾಕುವುದು.

ಈ ಕೈಗಾರಿಕೆಗೆ ನಮ್ಮ ದೇಶದಲ್ಲಿ ಸಾಕಷ್ಟು ಪ್ರೋತ್ಸಾಹ ಇರುವುದು ತುಂಬಾ ಶ್ಲಾಘನೀಯವಾದದ್ದೇ. ಅಖಿಲ ಕೊಡಗು ಜೇನು ಸೇಣ ಸಂಘವು ಈ ವೃತ್ತಿಯನ್ನು ಊರ್ಜಿತಗೊಳಿಸುವುದರಲ್ಲಿಯೂ, ಜನರನ್ನು ಉತ್ಸಾಹಭರಿತರನ್ನಾಗಿ ಮಾಡುವದರಲ್ಲಿಯೂ ನಿರತವಾಗಿದೆ. 'ಕೊಡಗು ಜೇನು' ಎಂದು ಪರದೇಶಗಳಲ್ಲಿ ಥಾರಾಳವಾಗಿ ಮಾರಾಟವಾಗುತ್ತಿರುವುದು ನಮಗೆಲ್ಲರಿಗೂ ಹೆಮ್ಮೆಯ ವಿಷಯವೇ ಸರಿ. ಮೊದಲೆಲ್ಲಾ ಕೆಲವು ಶಾಲೆಗಳಲ್ಲಿ ಇದನ್ನು ಉಪವೃತ್ತಿಯಾಗಿ ಕಲಿಸುತ್ತಿದ್ದರು. ಉದಾಹರಣೆಗಾಗಿ, ನಾಪೋಕ್ಲು ಶಾಲೆಯಲ್ಲಿ ಈ ವೃತ್ತಿಯನ್ನು ಪ್ರಾರಂಭಿಸಿ ತುಂಬಾ ಉತ್ಪತ್ತಿ ಸಹ ಬರುತ್ತಿತ್ತು. ಆದರೆ ಬರ ಬರುತ್ತಾ ಈಗ ಯಾವ ಶಾಲೆಯಲ್ಲಿಯೂ ತೋರುವುದೇ ಇಲ್ಲ. ಹಳ್ಳಿ ಶಾಲೆಗಳಲ್ಲಿ ಇದನ್ನು ಚೇತನಗೊಳಿಸುವುದು ತುಂಬಾ ಉತ್ತಮ. ವಿದ್ಯಾರ್ಥಿಗಳು ಕಲಿತರೆ ಮನೆಯಲ್ಲಿ ಈ ಕ್ರಮವನ್ನನುಸರಿಸಿ, ತಮ್ಮ ಜೀವನೋಪಾಯವನ್ನಾಗಿ ಮುಂದುವರಿಸಲು ಎಡೆಯಿದೆ. ಮೇಣ ಸಂಗ್ರಹ ಮಾಡುವುದು ತುಂಬಾ ಲಾಭಕರ ನಾನಾ ಪ್ರಯೋಜನಗಳಿಗೆ ಬರುವಂತ ಈ ವಸ್ತುವಿಗೆ ಈಗ ವಿಪರೀತ ಬೆಲೆ ಇದೆ. ಪ್ರತಿಯೊಬ್ಬನೂ ಈ ಉದ್ಯಮವನ್ನು ಗುಡಿ ಕೈಗಾರಿಕೆಯಂತೆ ಕೈಗೊಂಡರೆ ಅವನ ಆರ್ಥಿಕೋನ್ನತಿಯಾಗುವುದರಲ್ಲಿ ಸಂದೇಹವಿಲ್ಲ.

ನೂಲುವುದು

ನಮ್ಮ ದೇಶದ ಹವೆಯಂ ಹತ್ತಿ ಬೆಳೆಗೆ ಅಯೋಗ್ಯಕರ. ವೃಷ್ಟಿ ಕನಿಷ್ಠವಾಗಿರುವ ಸ್ಥಳಗಳಲ್ಲಿ ಬೆಳೆಸಬಹುದಾದರೂ ಅಷ್ಟು ಪ್ರಯೋಜನಕಾರಿಯಾಗಲಿಕ್ಕಿಲ್ಲ

ಕೊಡಗು ಪ್ರಾಂತೀಕ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ.ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1221ರಲ್ಲಿ ಸ್ಥಾಪಿಸಲಾಗಿದೆ.

ಅಧಿಕೃತ ಶೇರು ಭಂಡವಾಳ	ರೂ.	10,00,000.
ವಸೂಲಾದ ಶೇರು ಮೊಬಲಗು	ರೂ.	1,99,400.
ಕ್ಷೇಮನಿಧಿ	ರೂ.	59,000.
ಇತರ ನಿಧಿಗಳು	ರೂ.	36,000.

ಬ್ಯಾಂಕಿನ ಎಲ್ಲಾ ವಿಧದ ವ್ಯವಹಾರಗಳನ್ನೂ ಕೈಕೊಳ್ಳಲಾಗುವುದ

ಈ ಬ್ಯಾಂಕಿನಿಂದ ಹೆಚ್ಚಾಗಿ ಸಹಕಾರ ಸಂಘಗಳಿಗೇನೇ ಸಾಲ ಕೊಡುವುದಲ್ಲದೆ ಚಿನ್ನ, ಬೆಳ್ಳಿ ನಗಗಳ ಈಡಿನ ಮೇಲೆ ಸಹ ಸಾಲ ಕೊಡಲಾಗುವುದು. ಜೆಕ್ ಯೂ ಹ್ಯಾಫ್ಟ್‌ಗಳ ಡಿಸ್ಕೌಂಟು ಮಾಡಲ್ಪಡುವುದು. ಟ್ರೆನಿಟಿ ಮತ್ತು ವಾರ್ಡನ್ ಇನ್ಶೂರೆನ್ಸ್ ಕಂಪೆನಿಗಳ ಪ್ರೀಮಿಯಂ ಹಣವನ್ನು ಹೊಂದಿಕೊಳ್ಳಲಾಗುವುದು. ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

ಎಂ. ಎಸ್. ಸೋಮಯ್ಯ, ಗೌ. ಕಾರ್ಯದರ್ಶಿ.

ಕೆ. ಪಿ. ಅಪ್ಪಯ್ಯ, M. L. C. ಪ್ರೆಸಿಡೆಂಟ್ ಮತ್ತು ಖಜಾಂಚಿ.

ದಿ ಟ್ರಾಪಿಕಲ್

ಇನ್ಶೂರೆನ್ಸ್ ಕಂಪೆನಿ ಲಿಮಿಟೆಡ್.

ಮುಖ್ಯ ಖಚೇರಿ:–ಹೊಸ ಡೆಲ್ಲಿ.

52-21 ಸ್ಥಾಪಿಸಿದ ಡೈರೆಕ್ಟರರು:

ಪಂಡಿತ ಮೋತಿಲಾಲ್ ನೆಹರು. ಎಸ್. ಶ್ರೀನಿವಾಸ ಅಯ್ಯಂಗಾರ್
ಹಕೀಮ್ ಅಜಮುಲಖಾನ್. ಡಾ|| ಎಂ. ಎ. ಅನ್ಸಾರಿ.

Transacts:--LIFE, FIRE, MOTOR and MARINE.

ಬ್ರಾಂಚ್ ಸೆಕ್ರೆಟರಿ,
ಹಂಪನಕಟ್ಟಾ, ಮಂಗಳೂರು.

ಕೊಡಗು ಪ್ರಾಂತೀಕ ಸಹಕಾರಿ, ಮಾರ್ಕೆಟಿಂಗ್, ಫೆಡರೇಷನ್ ಲಿಮಿಟೆಡ್., ವೀರಾಜಪೇಟೆ.

ಸಮ್ಮಲ್ಲಿ ಕೋವಿಗಳು, ತೋಟಗಳು ಮತ್ತು ಎಲ್ಲಾ ತರಹದ ವ್ಯವಸಾಯದ ಹತ್ಯಾರುಗಳು ದೊರೆಯುತ್ತವೆ.

1. 32 ಪಿಸ್ತೂಲುಗಳು (Pistols) ಕ್ರಯ ರೂ. 162 ರಿಂದ 245ರ ವರೆಗೆ.
2. 12ನೇ ನಂಬರಿನ ಒಂಟಿ ಹೊಳವಿನ ಕೋವಿ ಕ್ರಯ ರೂ. 320–0–0
3. 12ನೇ ನಂಬರಿನ ಜೋಡು ಹೊಳವಿನ ಕೋವಿ (Webley & Scott)
4. 12ನೇ ನಂಬರಿನ ಜೋಡು ಹೊಳವಿನ ಕೋವಿ (Spanish make)
5. .32 ಪಿಸ್ತೂಲು ಮತ್ತು ರಿವಾಲ್ವರುಗಳ ತೋಟಗಳೂ ಸಹ ದೊರೆಯುತ್ತವೆ.
6. ಕಾಫಿ ಮತ್ತು ಕಿತ್ತಳೆ ಗಿಡಗಳಿಗೆ ಸ್ಪ್ರೆಮಾಡುವ ಪಂಪುಗಳು (Spraying Pumps)
7. ¾" ½" ⅜" ¼" ಕಬ್ಬಿಣದ ಸಲಾಕೆಗಳು.

ಹೆಚ್ಚಿನ ಮಾಹಿತಿಯನ್ನು ಆಫೀಸಿನಿಂದ ತಿಳಿದುಕೊಳ್ಳಬಹುದು.

(ಅವಶ್ಯವಿರುವ ಕೋವಿಗಳಿಗೂ, ತೋಟಗಳಿಗೂ ಜಿಲ್ಲಾ ಮೇಜಿಸ್ಟ್ರೇಟರಿಂದ ವಿಶೇಷ ಪರ್ಮಿಟು "Special permit" ಪಡೆದವರಿಗೆ ಮಾತ್ರ ದೊರೆಯುವದು)

ಎಂ. ಎಸ್. ಸೋಮಯ್ಯ,
ಗೌರವ ಕಾರ್ಯದರ್ಶಿ.

52–2

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.

ಈ ಮೇಲೆ ವಿವರಿಸಿರುವ ಕೈಗಾರಿಕೆ ಉದ್ಯಮಗಳು ಪ್ರಾರಂಭಿಸಿ ಅಭಿವೃದ್ಧಿಯಾಗಬೇಕಾದರೆ ಸರಕಾರದವರೂ, ಪ್ರಜೆಗಳೂ ಒಮ್ಮನಸ್ಸಿನಿಂದ ಸಹಕರಿಸಬೇಕು. ಜನರೂ ತಾವೇ ಮುಂದೆ ಬಂದು ರಚನಾತ್ಮಕ ಔದ್ಯೋಗಿಕ ಸಲಹೆಗಳನ್ನು ಸರಕಾರದೆದೆರಿಟ್ಟು ತಮ್ಮ ಅಚಲ ಮನೋ ಶ್ರದ್ಧೆಯನ್ನೂ ಶಾಶ್ವತವಾದ ಉತ್ಸಾಹವನ್ನೂ ತೋರಿಸಬೇಕು. ಉತ್ಸಾಹಿಗಳಿಗೆ ಸರಕಾರದವರು ಕನಿಷ್ಠ ಬಡ್ಡಿಯಲ್ಲಿ ಧನ ಸಹಾಯ ನೀಡಬೇಕು. ಧನವಂತ ಜಾಸ್ತೀ ವ್ಯಕ್ತಿಗಳು ಹುಟ್ಟಿ ರೀತಿಯಲ್ಲಿ ತಮ್ಮ ಮನೆಯಲ್ಲಿಯೂಗಲೀ ಗ್ರಾಮಗಳಲ್ಲಿಯೂಗಲೀ ಅಥವಾ ನಗರಗಳಲ್ಲಿಯೂಗಲೀ ಕೈಗಾರಿಕೆ ಕೇಂದ್ರಗಳನ್ನು ಸ್ಥಾಪಿಸಬೇಕು. ಔದ್ಯೋಗಿಕ ವೃತ್ತಿ ಶಾಲೆಯೊಂದು ಕೇಂದ್ರ ಸರಕಾರದ ನೇತೃತ್ವದಲ್ಲಿ ವೀರಾಜಪೇಟೆಯಲ್ಲಿ ಸ್ಥಾಪನೆಯಾದದ್ದು ಅತೀ ಶ್ಲಾಘನೀಯವಾದದ್ದು. ಆದರೆ ಒಂದು ಮಾತು. ವಿವಿಧ ಕೈಗಾರಿಕೆಗಳಲ್ಲಿ ತರಬೇತು ಹೊಂದುತ್ತಿರುವ ವಿದ್ಯಾರ್ಥಿಗಳೆಲ್ಲರೂ, ತಮ್ಮ ತರಬೇತು ಮುಗಿದ ನಂತರ ಅದೇ ವೃತ್ತಿಗಳನ್ನು ಕೈಗೊಳ್ಳಬೇಕು. ಸರಕಾರದವರು ಇವರಿಗೆ ಧನ ಸಹಾಯ ನೀಡಬೇಕು. ಅವರವರ ಗ್ರಾಮದ ಸಹಕಾರ ಸಂಘಗಳು ಸರ್ವ ಸಲಕರಣೆಗಳನ್ನು ಒಪಗಿಸಬೇಕು. ಈ ಕೈಗಾರಿಕೆಗಳನ್ನೆಲ್ಲಾ ಅಭಿವೃದ್ಧಿಪಡಿಸಲು ಸಹಕಾರ ಸಂಘಗಳಿಗೆ ತುಂಬಾ ಸಾಧ್ಯವಿದೆ. ಮನೆಯಲ್ಲಿಯೂಗಲಿ ಗ್ರಾಮಸಂಘಗಳ ಮುಖಾಂತರವಾಗಲೀ ತರಬೇತು ಪಡೆದವರು ವೃತ್ತಿಶಾಲೆಗಳನ್ನು ಸ್ಥಾಪಿಸಬೇಕು. ಇದಕ್ಕೆ ಸರಕಾರದ ಔದ್ಯೋಗಿಕಾಭಿವೃದ್ಧಿ ತತ್ವವನ್ನು ಸಹಕಾರದ ಧ್ಯೇಯವನ್ನು ತಳಹದಿಯಾಗಿಟ್ಟುಕೊಂಡು ತಮ್ಮ ವೃತ್ತಿಯನ್ನು ಮುಂದುವರಿಸಿದರೆ ಆಯಾ ವ್ಯಕ್ತಿಗಳಿಗೂ ಮತ್ತು ದೇಶಕ್ಕೂ ಕಲ್ಯಾಣವಾಗುವುದು.

ಇದಲ್ಲದೆ, ತರಬೇತು ಮುಗಿದನಂತರ ಗುಮಾಸ್ತ ಉದ್ಯೋಗವನ್ನು ಕೈಗೊಂಡರೆ ಶುದ್ಧ ಭ್ರಮೆಯೇ ಸರಿ. ವೃತ್ತಿ ಶಾಲೆಗೆ ಸೇರುವುದು ಬರೀ ತಮಾಷೆಗಾಗಿಯೇಂದು ಯಾರೂ ಕಾಲಹರಣ ಮಾಡಲಿಕ್ಕೆಂದೂ ಯಾರೂ ಭಾವಿಸಕೂಡದು. ಸ್ವಾತಂತ್ರ್ಯವಿದೆಯೆಂಬ ವರ್ಷದ ಮಧ್ಯದಲ್ಲಿ ಶಾಲೆಯನ್ನು ಬಿಟ್ಟು ಹೋಗುವುದು ಬುದ್ಧಿವಂತಿಕೆಯಲ್ಲ. ಈ ಕಲಾ ಶಾಲೆಗಳಲ್ಲಿ ತರಬೇತು ಹೊಂದುವವರೆಲ್ಲಾ ಸರಿಯಾಗಿ ಅಂತ ಗೊಳಿಸಿ ತಮ್ಮ ಗುರಿಯನ್ನು ಸಾಧಿಸಿದ್ದೇ ಆದರೆ ನಮ್ಮ ಈ ಪುಟ್ಟ ಕೊಡಗಿನ ಕೈಗಾರಿಕೆಗಳು ಅಭಿವೃದ್ಧಿಯಾಗುವುದು ನಿರ್ಧಾರವಾದ ಮಾತು.

ಬೇಗನೆ ಕೊಡಗಿಗೆ ಹೆಚ್ಚಿನ ಹೊಣೆಗಾರಿಕೆ ಸರಕಾರ ಬರುವುದೆಂದು ತಿಳಿದು ಬಂದಿದೆ. ಪ್ರಜಾ ಪ್ರತಿನಿಧಿಗಳ ಸಂಖ್ಯೆ ಹೆಚ್ಚಾಗಿ ಆಡಳಿತವು ನಿರಂಕುಶತೆಯಿಂದ ದೂರವಾಗುವಾಗ ಈ ಮೇಲಿನ ಕೈಗಾರಿಕೆಗಳನ್ನೆಲ್ಲಾ ಸಾಧ್ಯವಾದಷ್ಟು ಮಟ್ಟಿಗೆ ಅಭಿವೃದ್ಧಿಪಡಿಸಲು ತುಂಬಾ ಎಡೆಯಿದೆ.

ಅದರೆ ನೆರೆ ದೇಶಗಳಿಂದ ಕಚ್ಚಾ ಹತ್ತಿಯನ್ನು ತಂದು, ನಮ್ಮಲ್ಲಿ ನೂತು ಬಟ್ಟೆ ತಯಾರು ಮಾಡುವ ಕೈಮಗ್ಗಗಳನ್ನು ಸ್ಥಾಪಿಸಲು ತುಂಬಾ ಎಡೆಯಿದೆ. ತಕಲಿಗಳಲ್ಲಿ ನೂತರ ಚರಕಗಳಲ್ಲಿ ನೂಲುವುದನ್ನು ವಿದ್ಯಾರ್ಥಿಗಳಿಗೆ ಕಲಿಸುವುದು ಅತ್ಯುತ್ತಮ ವಿದ್ಯೆಯೆಂದು ನನ್ನ ಭಾವನೆಯಾಗಿದೆ. ಮಕ್ಕಳಾಗಿರುವಾಗ ಅಭ್ಯಸಿಸಿದರೆ ಶೈಲಿ ಮತ್ತು ಕ್ರಮ ಸರಿಯಾಗಿ ಮುಂದಬ್ಬಾಗುತ್ತದೆ. ಹೆಚ್ಚಿನ ಪ್ರಾಶಸ್ತ್ಯ ನವ್ಯ ಶಾಲೆಗಳಲ್ಲಿ ಕೊಡಲು ದುಃಸಾಧ್ಯವಾದರೂ, 'ಮನಸಿದ್ದಲ್ಲಿ ಮಾರ್ಗವಿದೆ' ಎನ್ನುವ ಹಾಗೆ, ಪ್ರಯತ್ನಿಸಿದರೆ ಸಫಲವಾಗುವುದು ಖಂಡಿತ.

ಬೆಲ್ಲ

ಖೈನೆ ಮರದಿಂದ ಬೆಲ್ಲವನ್ನು ತಯಾರು ಮಾಡುವುದು ಅತಿ ಪ್ರಯೋಜನಕಾರಿಯಾದ ಕೆಲಸವಾಗಿದೆ. ಕೊಡಗಿಗೆ ಬೇಕಾದ ಬೆಲ್ಲವನ್ನು ಇಲ್ಲಿಯೇ ತಯಾರು ಮಾಡಬಹುದಾಗಿದೆ. ಸೇಂದಿ ಅಂಗಡಿಗಳನ್ನು ನಿರ್ನಾಮಗೊಳಿಸಿ, ಮದ್ಯಪಾನವನ್ನು ರದ್ದು ಮಾಡಿದರೆ, ಈ ಕೈಗಾರಿಕೆಯು ಯಶಸ್ವಿಯಾಗುವುದು. ಸರಕಾರದವರೇ ತುಂಬಾ ಶ್ರದ್ಧೆಯನ್ನೂ, ಮುತುವರ್ಜಿಯನ್ನೂ ತೋರಿಸಿದರೆ ಅತಿ ಉತ್ತಮ ರೀತಿಯಿಂದ ನಡೆಸಬಹುದು. ಬೆಲ್ಲದ ಕ್ವಾಲಿಟಿಯನ್ನು ಈ ಏಪರ್ಾಡಿನಿಂದ ಅಂತ್ಯಗೊಳಿಸಬಹುದು. ಕೈಕೇರಿಯಲ್ಲಿ ಪ್ರಾರಂಭವಾದ ಈ ಉದ್ಯಮವು ಕೊಡಗಿನ ಎಲ್ಲಾ ಭಾಗಗಳಲ್ಲಿ ಉಂಟಾಗಿ, ಇದಕ್ಕೆಲ್ಲಾ ಒಂದು ಕೇಂದ್ರ ಸ್ಥಳವನ್ನು ರಚಿಸಿ ಮೇಲ್ವಿಚಾರಣೆ ಮತ್ತು ಆಡಳಿತ ಸರಿಯಾಗಿ ನಡೆದರೆ ಖಂಡಿತವಾಗಿಯೂ ಜಯಪ್ರದವಾಗುತ್ತದೆ. ಆದರೆ ಪ್ರಾರಂಭದ ಆನಂದ ಮತ್ತು ಉತ್ಸಾಹ ಅಂತ್ಯದ ವರೆಗೆ ಇಲ್ಲದಿರುವುದೇ ದೊಡ್ಡದೊಂದು ಅಡಚಣೆಯಾಗಿದೆ. ಇದರಿಂದ ದ್ವಂದ್ವ ಪ್ರಯೋಜನ ಉಂಟಾಗುವುದು. ಮದ್ಯ ಸೇವನೆಯಿಂದ ಜನರು ಪಾರಾಗುವರು. ಸಾಕಷ್ಟು ಬೆಲ್ಲ ಕಡಿಮೆ ದರದಲ್ಲಿ ಜನಕ್ಕೆ ದೊರೆಯುವುದು. ಮದ್ರಾಸು ಆಧಿಪತ್ಯದಲ್ಲಿ ಬೆಲ್ಲದ ಸ್ಥಿತಿಯು, ಮದ್ಯಪಾನ ನಿಷೇಧದಿಂದ ಬಹಳ ಸುಧಾರಿಸಿದೆ.

ಕೃಷಿ ಪದಾರ್ಥವಾದ ಭತ್ತದ ಕೆಲವು ಗಿರಣಿಗಳು ನಮ್ಮಲ್ಲಿವೆ ಆದರೆ ಮೂಲಿಕರು ದೇಶೀಯರ ಹಿತವನ್ನು ಎಷ್ಟರ ಮಟ್ಟಿಗೆ ಬಯಸುತ್ತಿದ್ದಾರೊ ನನಗೆ ತಿಳಿಯದು. ಕಾಫಿಗೆ ಹೆಸರುವಾಸಿಯಾದ ನಮ್ಮ ದೇಶದಲ್ಲಿ ಕಾಫಿ ಪುಡಿ ಮಾಡುವ ಮತ್ತು ಮಾರಾಟ ಮಾಡುವ ಏಪರ್ಾಡುಗಳನ್ನು ತೋಟಗಳ ಮೂಲಿಕರು ಮಾಡಿದರೆ ಉತ್ತಮವಾಗಿದೆ. ನಮ್ಮ ದೇಶದ ಕಾಫಿಯನ್ನು ನೆರೆ ರಾಷ್ಟ್ರಗಳಿಗೆ ಕಳಿಹಿಸಿ, ನಂತರ ಕಾಫಿ ಪುಡಿಯನ್ನು ಪುನಃ ತರಿಸಿ ನಾವು ಉಪಯೋಗಿಸುವುದರಲ್ಲಿ ನಷ್ಟವಿದೆ. ಚಾ ಗಿರಣಿಯೊಂದು ಹುದಿಕೇರಿಯ ಹತ್ತಿರ ಇದೆ. ಆದರೆ ಕೊಡಗಿನಲ್ಲಿ ಸಿದ್ಧವಾದ ಚಾವನ್ನು ಅದೆಷ್ಟು ಮಂದಿ ಕುಡಿಯುತ್ತಾರೆ? ಸ್ವಲ್ಪ ಮಟ್ಟಿಗಾದರೂ ಇದರ ಮೂರಾಟ ನಮ್ಮ ದೇಶದಲ್ಲಿ ನಡೆಯಬೇಕು.